# ಕ್ರಿಸ್ತವಿರೋಧಿಯ

## ಕುರಿತು ಅಧ್ಯಯನ

ಭಾಗ – ೩

ಅಧ್ಯಯನ # 37



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 37

# ಕ್ರಿಸ್ತವಿರೋಧಿಯ ಕುರಿತು ಅಭ್ಯಾಸ ಭಾಗ–3

<u>ದಯವಿಟ್ಟು ಗಮನಿಸಿ:</u> ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.

ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.

ಇಂದು ನಾವು ಕ್ರಿಸ್ತವಿರೋಧಿಯ ಅಭ್ಯಾಸದ ಮುಕ್ತಾಯ ಭಾಗದಲ್ಲಿ ಪ್ರವೇಶಿಸಲಿದ್ದೇವೆ.

ಸತ್ಯವೇದದ ಮೂಲಕ ಈ ಕ್ರಿಸ್ತವಿರೋಧಿಯ ವ್ಯವಸ್ಥೆಯನ್ನು ಗುರುತು ಹಿಡಿದು ಮತ್ತು ವ್ಯಾಪಕವಾಗಿ ಇದನ್ನು ನಿರೂಪಿಸಿದ ಮೇಲೆ ನಾವು ಸತ್ಯವೇದದಲ್ಲಿ ಇನ್ನೂ ಈ ಕ್ರಿಸ್ತವಿರೋಧಿಯ ವ್ಯವಸ್ಥೆಯ ಇತಿಹಾಸ ಹುಡುಕೋಣ ಮತ್ತು ಇದರ "ಹುಟ್ಟು" ಮತ್ತು "ಬೆಳವಣಿಗೆ" ಮತ್ತು ಇದರ ಕೊನೆಯ ನಾಶನದ ಕುರಿತು ಇರುವ ಎಲ್ಲಾ ಪ್ರವಾದನೆಗಳನ್ನು ನೋಡೋಣ.

**ಪೋಪ್ ವ್ಯವಸ್ಥೆ "ಮತಭ್ರಷ್ಟತೆಯನ್ನು" ಉಂಟುಮಾಡುವ ಕ್ರಿಸ್ತವಿರೋಧಿಯನ್ನು ಗುರುತು ಹಿಡಿದ ಮೇಲೆ ಈಗ ನಾವು ಸತ್ಯವೇದದಲ್ಲಿ ದಾಖಲಾಗಿರುವ ಅದರ ಬೆಳವಣಿಗೆಯನ್ನು ಕುರಿತು ಅಭ್ಯಾಸ ಮಾಡೋಣ.**

ಸತ್ಯವೇದವು ನಮಗೆ ಈ ವಿಷಯವನ್ನು ಕುರಿತು ಪ್ರಕಟನೆ ಪುಸ್ತಕದಲ್ಲಿ ಮತ್ತು 12ನೇ ಮತ್ತು 17ನೇ ಅಧಿಕಾರದಲ್ಲಿ ಸ್ಪಷ್ಟವಾದ

ದಾಖಲೆ ಮತ್ತು ಪರಿಜ್ಞಾನವನ್ನು ಒದಗಿಸುತ್ತದೆ.



ಈ ಎರಡೂ ಅಧ್ಯಾಯಗಳು ಎರಡು ಸ್ತ್ರೀಯನ್ನು ಕುರಿತು ಮಾತನಾಡುತ್ತದೆ. ಆದರೆ ನಮ್ಮ ಅಭ್ಯಾಸದಲ್ಲಿ ಈ ಎರಡೂ ಸ್ತ್ರೀಯು ಮೊತ್ತವಾಗಿ ವ್ಯತ್ಯಾಸವಾಗಿದೆ ಮತ್ತು ಎರಡು ಸ್ತ್ರೀಯರಲ್ಲಿ ಒಂದೇ ವಿಚಾರ ಇರುವುದಿಲ್ಲ ಮತ್ತು ಎರಡನ್ನೂ



"ಸ್ತ್ರೀ" ಎಂದು

ಸೂಚಿಸಿರುವದನ್ನು ಬಿಟ್ಟು ಯಾವ ಸಾಮಾನ್ಯತೆಯೂ ಇರುವುದಿಲ್ಲ!

ಈಗ ನಾವು ಪ್ರಕಟನೆ 12ನೇ ಅಧ್ಯಾಯವನ್ನು ಆರಂಭಿಸಿ ಅಭ್ಯಾಸ ಮಾಡೋಣ –

**ಪ್ರಕಟನೆ 12:1**

**"ಪರಲೋಕದಲ್ಲಿ ಒಂದು ಮಹಾಲಕ್ಷಣವು ಕಾಣಿಸಿತು. ಅದೇನೆಂದರೆ, ಸೂರ್ಯನನ್ನು ಧರಿಸಿಕೊಂಡಿದ್ದ ಒಬ್ಬ ಸ್ತ್ರೀಯಿದ್ದಳು; ಆಕೆಯ ಕಾಲುಗಳ ಕೆಳಗೆ ಚಂದ್ರನಿದ್ದನು, ಆಕೆಯ ತಲೆಯ ಮೇಲೆ ಹನ್ನೆರಡು ನಕ್ಷತ್ರಗಳುಳ್ಳ ಒಂದು ಕಿರೀಟವಿತ್ತು."**



**ಈ "ಸ್ತ್ರೀ" ಯಾರು?**

**ಇವೆಲ್ಲವೂ ಏನ್ನನ್ನು ಸೂಚಿಸುತ್ತದೆ?**

ಇದು ನೇರವಾದ ಭಾಷೆಯಲ್ಲ ಎಂದು ನಾವು ಕ್ರಿಸ್ತವಿರೋಧಿ ಅಭ್ಯಾಸದ ಮೊದಲ ಭಾಗದಲ್ಲಿ ನೋಡಿದ್ದೇವೆ...

ಇದು ಸಾಂಕೇತಿಕ ಭಾಷೆಯಾಗಿದೆ ಮತ್ತು ಈ ಸಂಕೇತಗಳ ಅರ್ಥ ವಿವರಣೆಮಾಡಬೇಕು!

ಇದೊಂದು ನಿಜವಾದ ಕ್ರೈಸ್ತ ಸಭೆಯ ಸುಂದರವಾದ ಸಾಂಕೇತಿಕ ಚಿತ್ರಣವಾಗಿದೆ. ಇದು ಸುವಾರ್ತಾ ಯುಗದ ಮೊದಲ ಶತಮಾನದಲ್ಲಿ ಆರಂಭವಾಯಿತು ಮತ್ತು ಇದು ಪಂಚಶತ್ತಮನ ನಂತರ ಮತ್ತು ಅಪೋಸ್ತಲರ ದಿನಗಳಲ್ಲಿ ಆರಂಭವಾಯಿತು.

**ಸಭೆಯನ್ನು ಒಂದು ಸ್ತ್ರೀಯಾಗಿ ತೋರಿಸಲಾಗಿದೆ ಏಕೆಂದರೆ ಆಕೆಯು ಯೇಸುವಿನ "ಮದುಮಗಳು" ಆಗಬೇಕಾಗಿದೆ.**

ಆಕೆಯ ಬಳಿ ಸುವಾರ್ತೆಯ ಜ್ಞಾನದ "ಬೆಳಕು" ಇತ್ತು (**ಸೂರ್ಯ**)

....ಮತ್ತು ಹಾಗೆಯೇ ಒಡಂಬಡಿಕೆಯ ಧರ್ಮಶಾಸ್ತ್ರ ಮತ್ತು ಅದರ ಛಾಯೆ ಮತ್ತು ಪ್ರವಾದನೆಗಳ ತಿಳುವಳಿಕೆಯ ಒಳ್ಳೆಯ ಅಸ್ತಿವಾರವಿತ್ತು ("**ಚಂದ್ರ**")

.....ಮತ್ತು ದೈವೀಕವಾಗಿ ನೇಮಕವಾದ ಬೋಧಕರಾದ ಹನ್ನೆರಡು ಅಪೋಸ್ತಲರು ಇದ್ದರು ("**ಹನ್ನೆರಡು ನಕ್ಷತ್ರಗಳು**")

ಈಗ ನಾವು ಮುಂದಿನ ವಾಕ್ಯವನ್ನು ಓದೋಣ –

**ಪ್ರಕಟನೆ 12:2**

**"ಆಕೆಯು ಗರ್ಭಿಣಿಯಾಗಿದ್ದು ಪ್ರಸವವೇದನೆಯಿಂದ ಸಂಕಟಪಡುತ್ತಾ ಕೂಗುತ್ತಿದ್ದಳು."**



**ಇದರ ಅರ್ಥವೇನು?**

**ಸಭೆಯು ಹೇಗೆ 'ಗರ್ಭಿಣಿ'ಯಾಯಿತು?**

ಬನ್ನಿ ನೋಡೋಣ........

ಇವೆಲ್ಲವು ಹೇಗೆ ಒಂದು ಗರ್ಭಿಣಿ ಸ್ತ್ರೀಯ ಗರ್ಭಕೋಶದಲ್ಲಿ ಒಂದು ಹೊಸ ಜೀವವು ಆರಂಭವಾಗುತ್ತದೋ ಅದೇ ರೀತಿ ಸಭೆಯ ದೇಹದ ಒಳಗೆ ಹೊಸ ಜೀವವು ಆರಂಭವಾಗಿ ಅದು ಕಣ್ಣಿಗೆ ಕಾಣದೆ ಬೆಳೆಯುತ್ತದೋ ಅದರ ಅದ್ಭುತವಾದ ಸಾಂಕೇತಿಕ ಭಾಷೆಯನ್ನು ಸೂಚಿಸುತ್ತದೆ!

ಈ ಕ್ರಿಸ್ತವಿರೋಧಿಯ ವ್ಯವಸ್ಥೆಯ ಮೊದಲ ಅಂಗಗಳಾದ ಸಭೆಯ ಶರೀರದೊಳಗಿಂದ ಬೆಳೆಯಿತ್ತೆಂಬ ವಿಷಯವನ್ನು ಅಪ್ರೋ. ಯೋಹಾನನು 1 ಯೋಹಾನ 2:18, 19ರಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ –

**"ಅವರು ನಮ್ಮನ್ನು ಬಿಟ್ಟು ಹೊರಟುಹೋದರು....."**

ಹೌದು! ಸಭೆಯ ದೇಹದೊಳಗೆ ಒಂದು ಹೊಸ ಬೆಳವಣಿಗೆಯಾಗುತ್ತಿತ್ತು!

ಕ್ರಿಸ್ತ ವಿರೋಧಿಯ ಬೆಳವಣಿಗೆಯ ಆರಂಭ

**"ಆಕೆಯು ಗರ್ಭಿಣಿಯಾಗಿದ್ದು ಪ್ರಸವವೇದನೆಯಿಂದ ಸಂಕಟಪಡುತ್ತಾ ಕೂಗುತ್ತಿದ್ದಳು."**

ಇದು ನಿಜವಾದ ಸಭೆಯ ಅಂಗಗಳ ಬೆಳವಣಿಗೆಯೊಳಗೆ ಸಂತೋಷವಿಲ್ಲದ ಮನೋಭಾವನೆ ಮತ್ತು ಸನ್ನಿವೇಶವನ್ನು ಸೂಚಿಸುತ್ತದೆ.

ಇದನ್ನು ಇನ್ನೊಂದು ಸಾಮ್ಯರೂಪದಲ್ಲಿಯೂ ಸಹ ತೋರಿಸಲಾಗಿದೆ –

**ಮತ್ತಾಯ 13:27**

**"ಆಗ ಯಜಮಾನನ ಆಳುಗಳು ಅವನ ಬಳಿಗೆ ಬಂದು -**
**ಅಯ್ಯಾ, ನೀನು ನಿನ್ನ ಹೊಲದಲ್ಲಿ**
**ಒಳ್ಳೆಯ ಬೀಜ ಬಿತ್ತಿದಿಯಲ್ಲಾ; ಹಣಜಿ ಎಲ್ಲಿಂದ ಬಂತು?...."**

ಹೌದು! ಈ "ಹಣಜಿ"ಗಳು ಕಾಣಿಸಿಕೊಂಡಿದ್ದರಿಂದ ಉಂಟಾದ ದುಃಖದ ಮನೋಭಾವನೆಯನ್ನು ಗಮನಿಸಿರಿ!

## ಇದೇ ಮೊದಲನೆಯ ಶತಮಾನ ಮತ್ತು ಎರಡನೆಯ ಶತಮಾನದ ಅಂತ್ಯದಲ್ಲಿದ್ದ ಸಭೆಯ ಚಿತ್ರಣವಾಗಿದೆ (ಕ್ರಿ.ಶ.)

ನಂತರ ನಾವು ಹೀಗೆ ಓದುತ್ತೇವೆ –

**ಪ್ರಕಟನೆ 12:3**

"ಪರಲೋಕದಲ್ಲಿ ಮತ್ತೊಂದು ಲಕ್ಷಣವು ಕಾಣಿಸಿತು. ಅದೇನೆಂದರೆ ಕೆಂಪಾದ ಮಹಾ ಘಟಸರ್ಪವಿತ್ತು; ಅದಕ್ಕೆ ಏಳು ತಲೆಗಳೂ ಹತ್ತು ಕೊಂಬುಗಳೂ ಇದ್ದವು; ಅದರ ತಲೆಗಳ ಮೇಲೆ ಏಳು ಮಕುಟಗಳಿದ್ದವು. "ಇಲ್ಲಿ ಆ ಕಾಲದಲ್ಲಿದ್ದ ಅರಸಾಳ್ವಿಕೆಯನ್ನು ಸಾಂಕೇತಿಕ ಭಾಷೆಯಲ್ಲಿ ಸೂಚಿಸಲಾಗಿದೆ – ರೋಮನ್ ಸಾಮ್ರಾಜ್ಯ!

"ಕೆಂಪಾದ ಮಹಾ ಘಟಸರ್ಪ"



ಇದು ಒಂದು ವಿಗ್ರಹ ಆರಾಧಕ ರೋಮನ್ ಸಾಮ್ರಾಜ್ಯವನ್ನು ಸೂಚಿಸುತ್ತದೆ. ಇದನ್ನೇ ಮತ್ತೆ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

### ದಾನಿಯೇಲನು 7:7

"ಅದು ಮುಂಚಿನ ಎಲ್ಲಾ ಮೃಗಗಳಿಗಿಂತ ವಿಲಕ್ಷಣವಾಗಿತ್ತು; ಅದಕ್ಕೆ ಹತ್ತು ಕೊಂಬುಗಳಿದ್ದವು."

### "ಏಳು ತಲೆಗಳೂ"

ಇದು ರೋಮನ ರಾಜ್ಯದ ಹಿಡಿತದಲ್ಲಿರುವ ಏಳು ಬಿನ್ನವಾದ ಮತ್ತು ವಿಧವಿಧವಾದ ಸ್ವರೂಪವನ್ನೊಳಗೊಂಡ ಸರ್ಕಾರವನ್ನು ಸೂಚಿಸುತ್ತದೆ.

ಮೊದಲ ನಾಲ್ಕು ಸರ್ಕಾರಗಳು ಯಾವುದೆಂದರೆ :-

1. **ಕಾನ್ಸುಲರ್ CONSULAR - ಕ್ರಿ.ಪೂ 30**
2. **ಇಂಪೀರಿಯಲ್ IMPERIAL - ಕ್ರಿ.ಪೂ 27**
3. **ಗೋಥಿಕ್ GOTHIC - ಕ್ರಿ.ಶ. 476**
4. **ಪಾಪಲ್ PAPAL - ಕ್ರಿ.ಶ. 539**

### "ಹತ್ತು ಕೊಂಬುಗಳು"

ಇದು ಈ ಸಾಮ್ರಾಜ್ಯದ ಹತ್ತು ವಿಭಾಗಗಳನ್ನು ಸೂಚಿಸುತ್ತದೆ.

### "ಪರಲೋಕದಲ್ಲಿ ಮತ್ತೊಂದು ಲಕ್ಷಣವು ಕಾಣಿಸಿತು."

ಇದು ರೋಮನ್ ಸಾಮ್ರಾಜ್ಯವನ್ನು ಸೂಚಿಸುತ್ತದೆ –**"ಪರಲೋಕದಲ್ಲಿ"** ಅಥವಾ ಧಾರ್ಮಿಕದ ಹತೋಟಿಯನ್ನು ಸೂಚಿಸುತ್ತದೆ!

ಹೌದು! ರೋಮನ್ ಸಾಮ್ರಾಜ್ಯವು ಸಾಮಾಜಿಕ ಮತ್ತು ಧಾರ್ಮಿಕ ಎರಡೂ ಅಧಿಕಾರ ಹೊಂದಿತ್ತು ಏಕೆಂದರೆ ಆ ಕಾಲದಲ್ಲಿ ಅದು **ಅನೇಕ ರಾಜ್ಯಗಳ ವಾಡಿಕೆಯಾಗಿತ್ತು.**

ಉದಾ: ಬಾಬಿಲೋನ್ ಸಾಮ್ರಾಜ್ಯ, ಮೆದೊ–ಪರ್ಶಿಯ ಸಾಮ್ರಾಜ್ಯ, ಇತರೆ.

ಈ ಸಾಮ್ರಾಜ್ಯದ ರಾಜರು ಅವರ "ದೇವರು"ಗಳ ಪ್ರತಿನಿಧಿಗಳು ಎಂದು ಹಕ್ಕು ಸಾಧಿಸುತ್ತಿದರು ಮತ್ತು ಜನರ ಮೇಲೆ ಧಾರ್ಮಿಕವಾಗಿಯೂ ಸಹ ಹತೋಟಿಯಲ್ಲಿಡಲು ಪ್ರಯಾಸಪಡುತ್ತಿದ್ದರು.

ಇದು ಅವರಿಗೆ ಸಾಮಾಜಿಕ ಅಧಿಕಾರ ಮತ್ತು ಆಳ್ವಿಕೆಯನ್ನು ಒಗ್ಗೂಡಿಸಲು ಬಹಳ ಸಹಾಯವಾಯಿತು.

ಹೌದು! ಈ "ಕೆಂಪಾದ ಮಹಾ ಘಟಸರ್ಪ" (ರೋಮನ್ ಸಾಮ್ರಾಜ್ಯ)ವು "ಪರಲೋಕದಲ್ಲಿತ್ತು" (ಧಾರ್ಮಿಕ ಹರ್ತೋಟಿಯಲ್ಲಿತ್ತು)



**ಇದು ಮೊದಲ ಮೂರು ಶತಕಗಳವರೆಗೂ ಧಾರ್ಮಿಕ ವಿಷಯಗಳಲ್ಲಿ ಈ ರೀತಿಯಾದ ಸ್ಥಿತಿಯಾಗಿತ್ತು.**

ನಂತರ ನಾವು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

ಪ್ರಕಟನೆ 12:4

"ಅದರ ಬಾಲವು ಆಕಾಶದಲ್ಲಿರುವ ನಕ್ಷತ್ರಗಳೊಳಗೆ ಮೂರರಲ್ಲೊಂದು ಭಾಗವನ್ನು ಎಳೆದು ಭೂಮಿಗೆ ಹಾಕಿತು. ಹೆರುತ್ತಿದ್ದ ಆ ಸ್ತ್ರೀಯು ಹೆತ್ತಕೂಡಲೆ ಆಕೆಯ ಮಗುವನ್ನು ನುಂಗಿಬಿಡಬೇಕೆಂದು ಆ ಘಟಸರ್ಪವು ಅಲ್ಲೇ ಕಾದುಕೊಂಡಿತ್ತು."

**ಇದು ಸುಮಾರು ಕ್ರಿ.ಶ 325 ರವರೆಗೆ ಆದಿಸಭೆಗಳಲ್ಲಿ ಮೂರನೆಯ ಮತ್ತು ನಾಲ್ಕನೆಯ ಶತಮಾನಗಳಲ್ಲಿ ಏನು ನಡೆಯಿತು  ಎಂಬ ಚಿತ್ರಣವಾಗಿದೆ !**

ಈ ವಾಕ್ಯದಲ್ಲಿ ನಾವು ಒಂದು ಪ್ರತ್ಯೇಕವಾದ ವಿಷಯವನ್ನು ನೋಡುತ್ತೇವೆ – ಅದೇನೆಂದರೆ, ಈ ವಾಕ್ಯದ ಮೊದಲ ಅರ್ಧ ಮತ್ತು ಎರಡನೆಯ ಅರ್ಧ ಭಾಗವು ಅದಲುಬದಲಾಗಿದೆ !!

ಹೌದು! ಕೆಳಗಿನ ಭಾಗವು ಮೇಲೆ ಬರುತ್ತದೆ ಮತ್ತು ಮೇಲಿನ ಭಾಗವು ಕೆಳಗೆ ಬರುತ್ತದೆ!!

ಆದ್ದರಿಂದ ಈ ವಾಕ್ಯದ ನಿಜವಾದ ಕ್ರಮವೇನೆಂದರೆ –

**"ಹೆರುತ್ತಿದ್ದ ಆ ಸ್ತ್ರೀಯು ಹೆತ್ತಕೂಡಲೆ ಆಕೆಯ ಮಗುವನ್ನು ನುಂಗಿಬಿಡಬೇಕೆಂದು ಆ ಘಟಸರ್ಪವು ಅಲ್ಲೇ ಕಾದುಕೊಂಡಿತ್ತು. ಮತ್ತು ಅದರ ಬಾಲವು ಆಕಾಶದಲ್ಲಿರುವ ನಕ್ಷತ್ರಗಳೊಳಗೆ ಮೂರರಲ್ಲೊಂದು ಭಾಗವನ್ನು ಎಳೆದು ಭೂಮಿಗೆ ಹಾಕಿತು.."**



ಈಗ ಈ ಸಾಂಕೇತಿಕ ಭಾಷೆಯ ಅರ್ಥಗಳನ್ನು ನೋಡೋಣ –

"ಆ ಘಟಸರ್ಪವು ಅಲ್ಲೇ (ಆ ಸ್ತ್ರೀಗಾಗಿ) ಕಾದುಕೊಂಡಿತ್ತು"



ಇದು "ಘಟಸರ್ಪ"ದಿಂದ ಆ "ಸ್ತ್ರೀ"ಯು ಎದುರಿಸುವ ಚಿತ್ರಹಿಂಸೆ ಮತ್ತು ವಿರೋಧತ್ವವನ್ನು ಸೂಚಿಸುತ್ತದೆ.

ಅಥವಾ ವಿಗ್ರಹ ಆರಾಧಕ ರೋಮನ್ ಸಾಮ್ರಾಜ್ಯದಿಂದ ಸಭೆಗೆ ಉಂಟಾಗುವ ಚಿತ್ರಹಿಂಸೆಯನ್ನು ಸೂಚಿಸುತ್ತದೆ.

ಈ ಸತ್ಯವೇದದ ವಾಕ್ಯವು ಬಹಳ ಪ್ರಾಮುಖ್ಯವಾಗಿ 10 ವರ್ಷಗಳ ಕಾಲ ರೋಮನ್ ಸಾಮ್ರಾಜ್ಯದ ಅರಸನಾದ ಡೈಯೋಕ್ಲೀಸಿಯನ್ ನಿಂದ ಕ್ರಿ.ಶ. 303 – 313 ವರೆಗೆ ಅಧಿಕವಾಗಿ ಸಭೆಗೆ ಚಿತ್ರಹಿಂಸೆ ಕೊಟ್ಟಿದ್ದನ್ನು ಸೂಚಿಸುತ್ತದೆ.

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಕಟನೆ 2:10**

“.....ನಿಮ್ಮಲ್ಲಿ ಕೆಲವರನ್ನು ಸೆರೆಮನೆಯೊಳಗೆ ಹಾಕುವದಕ್ಕಿದ್ದಾನೆ; ಮತ್ತು ಹತ್ತು ದಿವಸಗಳ ತನಕ ನಿಮಗೆ ಸಂಕಟವಿರುವದು”


ಪ್ರವಾದನೆ ಲೆಕ್ಕದಲ್ಲಿರುವ "ಹತ್ತುದಿವಸಗಳು" ನೇರವಾದ ಭಾಷೆಯಲ್ಲಿ
ಹತ್ತು ವರ್ಷಗಳನ್ನು ಸೂಚಿಸುತ್ತದೆ.

ಇದು ಕ್ರಿ.ಶ. 303–313ದ ಕಾಲವಾಗಿದೆ.




**" ಹೆರುತ್ತಿದ್ದ ಆ ಸ್ತ್ರೀಯು ಹೆತ್ತಕೂಡಲೆ ಆಕೆಯ ಮಗುವನ್ನು
ನುಂಗಿಬಿಡಬೇಕೆಂದು ಆ ಘಟಸರ್ಪವು ಅಲ್ಲೇ ಕಾದುಕೊಂಡಿತ್ತು"**

ಇದು ಡೈಯೋಕ್ಲೀಸಿಯನ್ ಸಭೆಗೆ ಅಧಿಕವಾದ ಚಿತ್ರಹಿಂಸೆ ನೀಡುತ್ತಿದ್ದ (**Constantine**) ಕ್ರಿ.ಶ. 313 ನಂತರದ ಸ್ಥಿತಿಯನ್ನು ಸೂಚಿಸುತ್ತದೆ;
ಅದರ ನಂತರದ ರೋಮನ್ ಸಾಮ್ರಾಜ್ಯದ ಅರಸನಾದ ಕಾನ್ಸ್ಟಂಟೀನ್ ಬಹಳ ಸೌಜನ್ಯವುಳ್ಳವನಾಗಿದ್ದು ಕೆಲವು ಸನ್ನಿವೇಶದಿಂದ ಕ್ರೈಸ್ತತ್ವದ ರೋಮ್ ಸಭಾದ್ಯಕ್ಷಕನಾಗಿ ಅಂಗೀಕರಿಸಿಕೊಂಡನು, ಮತ್ತು ಆತನು ಸ್ವತಃ "ಕ್ರಿಸ್ತವನಾಗಿ" ಮಾರ್ಪಟ್ಟನು.



ಈ ರೋಮ್ನ ಸಭಾಧ್ಯಕ್ಷಕನು ಅಧಿಕಾರದಲ್ಲಿ ಬೆಳದು ಪೋಪ್ ಆಗಿ ಮಾರ್ಪಟ್ಟನು ಮತ್ತು ಕ್ರಿಸ್ತವಿರೋಧಿಯ ವ್ಯವಸ್ಥೆಯಿಂದ ಪೋಪ್ ಆಗಿ ಬೆಳೆದನು.

**ಆದರೆ ಇಲ್ಲಿ ಕ್ರಿಸ್ತವಿರೋಧಿಯು "ಹುಟ್ಟಿದನು" ಅಥವಾ ತನ್ನ ಮೊದಲ ಸಣ್ಣದಾದ "ಕಣ್ಣಿಗೆಕಾಣುವಂತಹ" ತೋರಿಕೆಯನ್ನು ವ್ಯಕ್ತಪಡಿಸಿದನು.**

ಹೌದು! "ಘಟಸರ್ಪ"ವು ಆ "ಮಗುವನ್ನು ನುಂಗಿತು" ಅಥವಾ ಬೇರೆ ಮಾತಿನಲ್ಲಿ ಹೇಳಬೇಕಾದರೆ ರೋಮನ್ ಸಾಮ್ರಾಜ್ಯವು "ಕ್ರೈಸ್ತತ್ವದ" ರೋಮ್ನ ಸಭಾಧ್ಯಕ್ಷಕನಾಗಿ ಅಂಗೀಕರಿಸಿಕೊಂಡನು ಮತ್ತು ಈ "ಶಿಶುಸಂಬಂಧದ" ಕ್ರಿಸ್ತವಿರೋಧಿಯ ವ್ಯವಸ್ಥೆಯನ್ನು ಒಪ್ಪಿಕೊಂಡಿತು.

**ಆದ್ದರಿಂದ ವಿಗ್ರಹ ಆರಾಧಕ ರೋಮ್ "ಕ್ರಿಸ್ತತ್ವದ" ರೋಮ್ ಆಗಿ ಮಾರ್ಪಟಿತು.**

**"....ಅದರ ಬಾಲವು...."**

ಇಲ್ಲಿ "ಬಾಲವು" ಆ "ಘಟಸರ್ಪ" ದೇಹದ ಕೊನೆಯನ್ನು ಸೂಚಿಸುತ್ತದೆ – ಅಥವಾ ಅದರ ದೇಹದ ಉದ್ದದಲ್ಲಿರುವ ಕೊನೆಯ ಭಾಗವನ್ನು ಸೂಚಿಸುತ್ತದೆ!

ಇಲ್ಲಿಯೂ ಸಹ "ಬಾಲವು" ರೊಮನ್ ಸಾಮ್ರಾಜ್ಯದ ಕೊನೆಯ ಭಾಗ – ಅದರ ಕೊನೆಯ ಚಕ್ರವರ್ತಿಗಳನ್ನು ಸೂಚಿಸುತ್ತದೆ!!

ಇಲ್ಲಿ ಕೊನೆಯ ಚಕ್ರವರ್ತಿಗಲಲ್ಲಿನ ವಿಶಿಷ್ಟನಾದವನನ್ನು ಸೂಚಿಸುತ್ತದೆ – ಆತನೇ ಚಕ್ರವರ್ತಿಯಾದ ಕಾನ್ಸ್ಟಂಟೀನ್!

**"....ಆಕಾಶದಲ್ಲಿರುವ ನಕ್ಷತ್ರಗಳೊಳಗೆ ಮೂರರಲ್ಲೊಂದು ಭಾಗವನ್ನು....."**

ಇದು ಕ್ರೈಸ್ತ ಸಭಾಧ್ಯಕ್ಷಕರ ವಿಶೇಷ ಸಮಿತಿ (ಸಮಾಲೋಚನೆ)ಯನ್ನು ಸೂಚಿಸುತ್ತದೆ –

**"ಆಕಾಶದಲ್ಲಿರುವ ನಕ್ಷತ್ರಗಳು"**

ಕೆಳಗೆ ಕೊಟ್ಟಿರುವ ವಾಕ್ಯವನ್ನು ಕುರಿತು ಕಾನ್ಸ್ಟಂಟೀನ್ ಎಂಬುವವನು ಯೇಸುವಿನ ಸ್ವಭಾವದ ಪ್ರಶ್ನೆಯನ್ನು ಕುರಿತು ವಿಚಾರಣೆಗೆ ವ್ಯವಸ್ಥೆ ಮಾಡುತ್ತಾನೆ –

# The Council of Nicaea A.D.325



**ಯೋಹಾನ 10:30** - "…..ನಾನೂ ತಂದೆಯೂ ಒಂದಾಗಿದ್ದೇವೆ."

ಸುಮಾರು "ಮೂರರಲ್ಲೊಂದು ಭಾಗದ" ಕ್ರೈಸ್ತ ಸಭಾಧ್ಯಕ್ಷಕರು ಆ ಕಾಲದಲ್ಲಿ ಆಹ್ವಾನವನ್ನು ಸ್ವೀಕರಿಸಿದರು ಮತ್ತು ಚಕ್ರವರ್ತಿಯಾದ ಕಾನ್ಸ್ಟಂಟೀನ್ ವ್ಯವಸ್ಥೆಮಾಡಿದ ಆ ಸಮಿತಿಯಲ್ಲಿ ಪಾಲ್ಗೊಂಡರು.

**"…..ಎಳೆದು ಭೂಮಿಗೆ ಹಾಕಿತು"**

ಇದು ಚಕ್ರವರ್ತಿಯಾದ ಕಾನ್ಸ್ಟಂಟೀನ್ ನ ಆ ಸಭಾಧ್ಯಕ್ಷಕರ ಮೇಲೆ ಉಂಟಾದ ಪರಿಣಾಮವನ್ನು ಸೂಚಿಸುತ್ತದೆ.

ಹೌದು! ಆತನು ಅವರಿಗೆ ಸಲ್ಲಿಸಿದ ಗೌರವ ಮತ್ತು ಬಹುಮಾನಗಳು ಅವರಲ್ಲಿ ಅಧಿಕವಾದ ಅಕರ್ಷಣೆ ಉಂಟುಮಾಡಿತು ಮತ್ತು ಆತ್ಮೀಕಕ್ಕಿಂತಲೂ ಲೌಕಿಕವಾಗಿ ಅದನ್ನು ತೆಗೆದುಕೊಂಡರು!!

ಹೌದು! ಆತನು ಈ ಸಭಾಧ್ಯಕ್ಷಕರನ್ನು ಲೌಕಿಕರಾಗುವಂತೆ ಮಾಡಿದನು ಮತ್ತು ಅವರು ಅತ್ಮೀಕ ಸ್ಥಾನದಿಂದ ಬೀಳುವಂತೆ ಮಾಡಿದರು –

"…..ಎಳೆದು ಭೂಮಿಗೆ ಹಾಕಿತು"

ನಂತರ ನಾವು ಹೀಗೆ ಓದಿ ಮುಂದುವರಿಯುತ್ತೇವೆ –

## ಪ್ರಕಟನೆ 12:5

**“ಆಕೆ ಜನಾಂಗಗಳನ್ನು ಕಬ್ಬಿಣದ ಕೋಲಿನಿಂದ ಆಳಬೇಕಾದ ಒಂದು ಗಂಡು ಮಗುವನ್ನು ಹೆತ್ತಳು; ಆ ಕೂಸು ಫಕ್ಕನೆ ದೇವರ ಬಳಿಗೂ ಆತನ ಸಿಂಹಾಸನದ ಬಳಿಗೂ ಎತ್ತಲ್ಪಟ್ಟಿತು.”**

ಈ ವಾಕ್ಯವು ಪೋಪ್ ರೋಮ್ ಅನ್ನು (**Papal Rome**) ನಿಧಾನವಾಗಿ ರೂಪಾಂತರಗೊಳ್ಳುವುದನ್ನು ಕುರಿತು ಮಾತನಾಡುತ್ತದೆ. ಮತ್ತು ಭವಿಷ್ಯದಲ್ಲಿ ಬೆಳೆದು ಕ್ರಿಸ್ತವಿರೋಧಿವ್ಯವಸ್ಥೆಯಾಗಿ ಸ್ಥಾಪನೆಯಾಗುವದನ್ನು ಕುರಿತು ಮಾತನಾಡುತ್ತದೆ. – ಆತನು ಬೆಳೆದು

“....ಅಧರ್ಮ ಸ್ವರೂಪ"ನಾಗಿ ಮಾರ್ಪಡುವನು” (2 ಥೆಸಲೋನಿಕದವರಿಗೆ 2:3)

**“ಜನಾಂಗಗಳನ್ನು ಕಬ್ಬಿಣದ ಕೋಲಿನಿಂದ ಆಳುವನು”**

ಇದು ಅಂಧಕಾರದ ಯುಗದಲ್ಲಿ ( **Dark ages** ) ಪೋಪನ ಆಳ್ವಿಕೆಯನ್ನು ಸೂಚಿಸುತ್ತದೆ.

**"ಫಕ್ಕನೆ ದೇವರ ಬಳಿಗೂ ಆತನ ಸಿಂಹಾಸನದ ಬಳಿಗೂ ಎತ್ತಲ್ಪಟ್ಟಿತು"**

ಇದು ಸಭೆಯೊಳಗೆ ಈ ಪೋಪನ ವ್ಯವಸ್ಥೆಯು ತನ್ನನ್ನು ತಾನೇ ಹೆಚ್ಚಿಸಿಕೊಳ್ಳುವದನ್ನು **ಸೂಚಿಸುತ್ತದೆ.** "**ತಾನು ದೇವರೆಂದು ಹೇಳಿಕೊಂಡು ದೇವರ ಗರ್ಭಗುಡಿಯಲ್ಲೇ ಕೂತುಕೊಳ್ಳುತ್ತಾನೆ.**" (2 **ಥೆಸಲೋನಿಕ** 2:3,4)

ಹೌದು! ಈ ವಾಕ್ಯವು ಪ್ರವಾದನೆಯಾಗಿ ಈ "ಗಂಡುಮಗು"ವಿನ ಭವಿಷ್ಯವನ್ನು ಕುರಿತು ಮಾತನಾಡುತ್ತದೆ.

...........ಇದು ಕ್ರಿ.ಶ ನಾಲ್ಕನೆಯ ಶತಮಾನದಲ್ಲಿ ಚಿಕ್ಕದಾದ "ಕಣ್ಣಿಗೆ ಕಾಣುವ" ಕ್ರಿಸ್ತವಿರೋಧಿಯ ವ್ಯವಸ್ಥೆಯ ಆರಂಭದ ಕಾಲವನ್ನು ಸೂಚಿಸುತ್ತದೆ.

ನಂತರ ನಾವು ಹೀಗೆ ಓದುತ್ತೇವೆ –

## ಪ್ರಕಟನೆ 12:6

**“ಆ ಸ್ತ್ರೀಯು ಅರಣ್ಯಕ್ಕೆ ಓಡಿಹೋದಳು; ಅಲ್ಲಿ ಆಕೆಗೆ ಸಾವಿರದ ಇನ್ನೂರ ಅರುವತ್ತು ದಿನಗಳವರೆಗೆ ಪೋಷಣೆಯಾಗಬೇಕೆಂದು ದೇವರು ಸ್ಥಳವನ್ನು ಸಿದ್ಧಮಾಡಿದ್ದನು.”**

ಹೌದು! ಇಲ್ಲಿ ನಮ್ಮ ಕೇಂದ್ರೀಕರನವು

**ಆ "ಸ್ತ್ರೀ"ಯತ್ತ ತಿರುಗುತ್ತದೆ**

........ನಿಜವಾದ ಯೇಸುಕ್ರಿಸ್ತನ ಸಭೆ ಮತ್ತು ಈ ಕ್ರಿಸ್ತವಿರೋಧಿಯ ವ್ಯವಸ್ಥೆಯ ಎಲ್ಲಾ ಬೆಳವಣಿಗೆಗಳ ಮಧ್ಯದಲ್ಲೂ ಈ ಸಭೆಯ ಪರಿಸ್ಥಿತಿಯನ್ನು ಸೂಚಿಸುತ್ತದೆ!

**"......ಆ ಸ್ತ್ರೀಯು ಅರಣ್ಯಕ್ಕೆ ಓಡಿಹೋದಳು....."**

ಇದು ಕ್ರಿಸ್ತವಿರೋಧಿಯವ್ಯವಸ್ಥೆಯ ಅಂಗಗಳ ನಡತೆ ಮತ್ತು ಕ್ರಿಯೆಗಳಿಂದ ನಿಜವಾದ ಸಭೆಯ ಅಂಗಗಳು ಪ್ರತ್ಯೇಕಗೊಳ್ಳುವುದನ್ನು (ಬೇರ್ಪಡುವದನ್ನು) ಸೂಚಿಸುತ್ತದೆ.

ಹೆಸರಿಗೆ ಮಾತ್ರ ಇರುವ ಸಭೆಯ ವ್ಯವಸ್ಥೆಯಿಂದ ಬೇರ್ಪಡುವಿಕೆ.

ಈ ಕ್ರಿಸ್ತವಿರೋಧಿಯ ವ್ಯವಸ್ಥೆಯ ಅಧಿಕಾರ ನಡೆಸುವದಕ್ಕೆ ಒಂದು ನಿಗಧಿತ ಕಾಲಕ್ಕೆ ಮಾತ್ರ ಅನುಮತಿಸಲಾಗಿತ್ತು ಎಂದು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

"ಸಾವಿರದ ಇನ್ನೂರ ಅರುವತ್ತು ದಿವಸಗಳು"

**ಇದು ಕಾಲಪ್ರವಾಧನೆಯಾಗಿದ್ದು ಕ್ರಿ.ಶ.539ರಿಂದ ಕ್ರಿ.ಶ 1799ವರೆಗೆ ಒಟ್ಟು 1260 ವರ್ಷಗಳನ್ನು ತೋರಿಸುತ್ತದೆ.**

ನಂತರ ನಾವು ಹೀಗೆ ಓದುತ್ತೇವೆ –

**ಪ್ರಕಟನೆ 12:7**

"ಪರಲೋಕದಲ್ಲಿ ಯುದ್ಧ ನಡೆಯಿತು. ಮೀಕಾಯೇಲನೂ ಅವನ ದೂತರೂ ಘಟಸರ್ಪನ ಮೇಲೆ ಯುದ್ಧಮಾಡುವದಕ್ಕೆ ಹೊರಟರು. ಘಟಸರ್ಪನೂ ಅವನ ದೂತರೂ ಯುದ್ಧಮಾಡಿ ಸೋತುಹೋದರು."

**ಈ ವಾಕ್ಯವು ಕ್ರಿ.ಶ.325ರ ನಂತರ - ನಾಲ್ಕನೆಯ ಶತಮಾನದಿಂದ ಆರನೆಯ ಶತಮಾಣದವರೆಗೆ ನಡೆದ ಹೆಸರಿಗೆ ಮಾತ್ರ ಕ್ರೈಸ್ತರಲ್ಲಿ ನಡೆದ ಸನ್ನಿವೇಷಗಳು ಮತ್ತು ಘಟನೆಗಳ ಬಗ್ಗೆ ಕೊಂಡೊಯ್ಯುತ್ತದೆ.**

ಹೌದು! "ಪರಲೋಕದಲ್ಲಿ ಯುದ್ಧ ನಡೆಯಿತು" ಎಂದು ನಾವು ಓದುತ್ತೇವೆ!

ನಾವು ನೆನಪಿನಲ್ಲಿ ಇಡಬೇಕಾದದ್ದೇನೆಂದರೆ ಇದು ಮೊದಲ ಮತ್ತು ಮೂರನೆಯ ವಾಕ್ಯದಲ್ಲಿ ಹೇಳಿದ ಅದೇ ಪರಲೋಕವನ್ನು ಕುರಿತದ್ದಾಗಿದೆ

– ಧಾರ್ಮಿಕ ಲೋಕ !! ಅಥವಾ ಹೋರಾಟವನ್ನು ಸೂಚಿಸುತ್ತದೆ

"ಯುದ್ಧ" ಎಂದರೆ ಪ್ರಯಾಸವನ್ನು ಅಥವಾ ಹೋರಾಟವನ್ನು ಸೂಚಿಸುತ್ತದೆ.
ಈಗ ನಾವು ಯಾರ ನಡುವೆ ಈ "ಯುದ್ಧ" ಅಥವಾ ಹೋರಾಟವಿದೆ
ಎಂದು ನೋಡೋಣ –

**"ಮೀಕಾಯೇಲನೂ ಅವನ ದೂತರೂ"**

**ಇದು ಯಾರನ್ನು ಸೂಚಿಸುತ್ತದೆ?**

ನಮ್ಮೆಲ್ಲರಿಗೂ ಗೊತ್ತಿರುವದೇನೆಂದರೆ ಮೀಕಾಯೇಲನ" ಎಂಬ ಹೆಸರು ಪರಲೋಕದಲ್ಲಿ ಯೇಸುವಿನ ಹೆಸರಾಗಿದೆ, ಅದರ ಅರ್ಥ ಏನೆಂದರೆ –

"ದೇವರ ಸ್ವರೂಪದಲ್ಲಿ" ಅಥವಾ "ದೇವರ ಹಾಗೆಯೇ"

**"Michael" ಎಂಬ ಹೆಸರಲ್ಲಿ "El" ಅಂದರೆ "ದೇವರು" ಮತ್ತು "Mika" ಎಂದರೆ "ಸ್ವರೂಪ" ಅಥವಾ "ಹಾಗೆಯೇ"**

ಇದು ಭೂಮಿಯಲ್ಲಿ ದೇವರ ಪ್ರತಿನಿಧಿ – "ದೇವರ ಹಾಗೆಯೇ" ಎಂದು ಹಕ್ಕುಸಾಧಿಸುವ ಅಧಿಕಾರದಲ್ಲಿರುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ!

ಹೌದು! ಪೋಪ್ ವ್ಯವಸ್ಥೆಯನ್ನು (Papacy ) ಸೂಚಿಸುತ್ತದೆ!

ಆದ್ದರಿಂದ ಇಲ್ಲಿ "ಮೀಕಾಯೇಲನೂ ಅವನ ದೂತರೂ" ಎಂಬದು ರೋಮ್ನ ಸಭಾದಕ್ಷಕ ಮತ್ತು ಸಭೆಯ ಇತರ ಸ್ವಧರ್ಮ ಭ್ರಷ್ಟ ಸದಸ್ಯರು.
ಇವರು ಅಂಥಹ ಅಧಿಕಾರವನ್ನು ಹುಡುಕುತ್ತಿದ್ದರು
ಮತ್ತು ಮುಂದೆ ಪೋಪ್ ವ್ಯವಸ್ಥೆಯಲ್ಲಿ ಬೆಳೆಯುವವರಾಗಿದ್ದರು.

**"ಘಟಸರ್ಪನೂ ಅವನ ದೂತರೂ"**

ಇದು ರೋಮನ್ ಸಾಮ್ರಾಜ್ಯದ ಸಾಮಾಜಿಕ ಮತ್ತು ಧಾರ್ಮಿಕ ಎರಡನ್ನೂ ಹತೋಟಿಯಲ್ಲಿ ಇಟ್ಟುಕೊಂಡಿರುವದನ್ನು ಸೂಚಿಸುತ್ತದೆ.

## ಈಗ ಈ "ಯುದ್ಧ" ಅಥವಾ "ಹೋರಾಟ" ಯಾತಕ್ಕಾಗಿ?

ಇದು "ಪರಲೋಕ"ವನ್ನು ಹತೋಟಿಯಲ್ಲಿಡಲು ಅಥವಾ ಧಾರ್ಮಿಕ ಲೋಕ ಅಥವಾ ಧಾರ್ಮಿಕ ಮುಖ್ಯಸ್ಥನಾಗಿರುವದ್ದಾಗಿದೆ.

ಮತ್ತು ಈ ಹೋರಾಟ ಬಹು ಕಾಲ ತೆಗೆದುಕೊಂಡಿದೆ!!

ಈಗ ನಾವು ಕೆಳಗಿನ ವಾಕ್ಯವನ್ನು ಓದಿ ಮುಂದುವರಿಯೋಣ –

**ಪ್ರಕಟನೆ 12:8-9**

**"ಮತ್ತು ಪರಲೋಕದೊಳಗೆ ಅವರಿಗೆ ಸ್ಥಾನವು ತಪ್ಪಿಹೋಯಿತು. ಭೂಲೋಕದವರನ್ನೆಲ್ಲಾ ಮರುಳುಗೊಳಿಸುವ ಆ ಮಹಾ ಘಟಸರ್ಪನು ಅಂದರೆ ಪಿಶಾಚನೆಂತಲೂ ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪವು ದೊಬ್ಬಲ್ಪಟ್ಟು ಭೂಮಿಗೆ ಬಿದ್ದನು; ಅವನ ದೂತರೂ ಅವನೊಂದಿಗೆ ದೊಬ್ಬಲ್ಪಟ್ಟರು."**

ಈ ವಾಕ್ಯವು ಕ್ರಿ.ಶ.325 ರಿಂದ ಕ್ರಿ.ಶ.539 ವರೆಗೆ ನಡೆದ ಬಹುಕಾಲದ ಹೊರಾಟವನ್ನು ಕುರಿತು ಮಾತನಾಡುತ್ತದೆ.

ಸಭೆಯ ಸ್ವಧರ್ಮ ಭ್ರಷ್ಟ ಸದಸ್ಯರು ರೋಮ್ ಸಭಾದಕ್ಷಕರ ಮುಖ್ಯಸ್ಥಿಕೆಯಲ್ಲಿ "ಜಯಶಾಲಿಯಾಗಿ" "ವಿಗ್ರಹ ಆರಾಧಕ"ರಾದ ರೊಮ್ ರವರಿಂದ ಧಾರ್ಮಿಕ ಹತೋಟಿಯನ್ನು ಸ್ವಾಧೀನಪಡಿಸಿಕೊಂಡರು.

**"ಆ ಮಹಾ ಘಟಸರ್ಪನು ಅಂದರೆ ಪಿಶಾಚನೆಂತಲೂ ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪವು ದೊಬ್ಬಲ್ಪಟ್ಟು"**

ಇಲ್ಲಿ ಘಟಸರ್ಪ ಎಂಬ ರೋಮನ್ ಸಾಮ್ರಾಜ್ಯವು **"ಪಿಶಾಚನೂ ಸೈತಾನ"**ನಾಗಿ ಮಾರ್ಪಡುವದನ್ನು ಸೂಚಿಸಲಾಗಿದೆ.

ಏಕೆಂದರೆ ಸ್ವತಃ ರೋಮನ್ ಸಾಮ್ರಾಜ್ಯವು ಅನೇಕ ರೀತಿಯಲ್ಲಿ ಪಿಶಾಚನೂ ಮತ್ತು ಸೈತಾನನ ಹಾಗಿತ್ತು.

ಪಿಶಾಚನ ಹಾಗೆ ಅದರ (ಸರ್ಕಾರದ) "ರೂಪ"ವನ್ನು ಬದಲಾಯಿಸುವ ಸಾಮರ್ಥ್ಯವಿತ್ತು!!

ಇನ್ನೂ (ಅನೇಕ) ಸೈತಾನನ ಮತ್ತು ಪಿಶಾಚನ ಗುಣಗಳು ಈ ರೋಮನ್ ಸಾಮ್ರಾಜ್ಯದಲ್ಲಿ ಒಂದಾಗಿ ಸೇರಿತ್ತು.

ಆದ್ದರಿಂದ ರೋಮನ್ ಸಾಮ್ರಾಜ್ಯಕ್ಕೆ ಸೈತಾನನೆಂಬ ಸಂಕೇತವು ಸರಿಯಾಗಿ ಹೊಂದಿಕೆಯಾಗುತ್ತದೆ!

"ಭೂಮಿಗೆ ಬಿದ್ದನು"

ಇದು ರೋಮನ್ ಸಾಮ್ರಾಜ್ಯವು ತನ್ನ ಧಾರ್ಮಿಕ ಹತೋಟಿಯಲ್ಲಿರುವ ಸ್ಥಾನವನ್ನು ಬಿಟ್ಟು ಸಾಮಾಜಿಕ ಹತೋಟಿಯಲ್ಲಿ ಮಾತ್ರ ಇರುವುದನ್ನು ಸೂಚಿಸುತ್ತದೆ –

"ಭೂಮಿಗೆ"

ಇದಲ್ಲದೆ ಇನ್ನೊಂದು ವಿಷಯವನ್ನು ಗಮನಿಸಿರಿ –

"ಮತ್ತು ಪರಲೋಕದೊಳಗೆ ಅವರಿಗೆ ಸ್ಥಾನವು ತಪ್ಪಿಹೋಯಿತು"

ಹೌದು! ಇದು ಕೆಳಗೆ ಕೊಟ್ಟಿರುವ ನಾಮಧೇಯ (**PONTIFEX MAXIMUS**) ಉಂಟಾದಾಗ ಆಯಿತು –

"ಪೊಂತಿಫೆಕ್ಸ್ ಮ್ಯಾಕ್ಸಿಮಸ್"

(ಎಲ್ಲಾ ಧಾರ್ಮಿಕ ವಿಷಯಗಳಲ್ಲಿ ಮುಖ್ಯಸ್ಥನು)

ಇದು ಕ್ರಿ.ಶ.539 ರಲ್ಲಿ ರೋಮನ್ ಸಾಮ್ರಾಜ್ಯದ ಕೈಗಳಿಂದ ರೋಮ್ನ ಸಬಾಧ್ಯಕ್ಷಕನಿಗೆ ಹಸ್ತಾಂತರಿಸಿದಾಗ ಆಯಿತು!

ನಂತರ ನಾವು ಕೆಳಗಿನ ವಾಕ್ಯವನ್ನು ಓದುತ್ತಾ ಮುಂದುವರಿಯುತ್ತೇವೆ –

**ಪ್ರಕಟನೆ 12:10-12**

"ಆಗ ಪರಲೋಕದಲ್ಲಿ ಮಹಾಶಬ್ದವನ್ನು ನಾನು ಕೇಳಿದೆನು. ಅದು - ಈಗ ರಕ್ಷಣೆಯೂ ಶಕ್ತಿಯೂ ನಮ್ಮ ದೇವರ ರಾಜ್ಯವೂ ಆತನ ಕ್ರಿಸ್ತನ ಅಧಿಕಾರವೂ ಬಂದವು; ಯಾಕಂದರೆ ಹಗಲಿರುಳು ನಮ್ಮ ಸಹೋದರರ ಮೇಲೆ ನಮ್ಮ ದೇವರ ಮುಂದೆ ದೂರು ಹೇಳಿದ ದೂರುಗಾರನು ದೊಬ್ಬಲ್ಪಟ್ಟಿದ್ದಾನೆ. ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಕುರಿಮರಿಯಾದಾತನ ರಕ್ತದಿಂದಲೂ ತಮ್ಮ ಸಾಕ್ಷಿಯ ವಾಕ್ಯದಿಂದಲೂ ಅವನನ್ನು ಜಯಿಸಿದರು. ಆದದರಿಂದ ಪರಲೋಕಗಳೇ, ಅದರಲ್ಲಿ ವಾಸಮಾಡುವವರೇ, ಹರ್ಷಗೊಳ್ಳಿರಿ. ಭೂಮಿಯ ಮೇಲೆ ಮತ್ತು ಸಮುದ್ರದಲ್ಲಿ ಇರುವವರಿಗೆ ಅಯ್ಯೋ! ಯಾಕಂದರೆ ಸೈತಾನನು ತನಗಿರುವ ಕಾಲವು ಸ್ವಲ್ಪವೆಂದು ತಿಳಿದು ಮಹಾರೌದ್ರವುಳ್ಳವನಾಗಿ ನಿಮ್ಮ ಕಡೆಗೆ ಇಳಿದು ಬಂದಿದ್ದಾನೆ ಎಂಬದಾಗಿ ಹೇಳಿತು."

ಈ ವಾಕ್ಯಗಳಲ್ಲಿ ಕ್ರಿ.ಶ.539 ರ ನಂತರ ಪೋಪ್ ವ್ಯವಸ್ಥೆಯು ದೃಢವಾದ ಸ್ಥಾಪನೆಯಾಗಿದ್ದನ್ನು ಸಾಂಕೇತಿಕವಾಗಿ ಸೂಚಿಸಲಾಗಿದೆ.

ನಂತರ ಕ್ರಿ.ಶ. 799 ರಲ್ಲಿ –

"ಪರಿಶುದ್ಧ ರೋಮನ್ ಸಾಮ್ರಾಜ್ಯ"

ವಾಗಿ ಮಹಾ ಅಧಿಕಾರದೊಂದಿಗೆ ಸ್ಥಾಪಿತವಾಯಿತು.

ನಂತರ ರೋಮ್ನ ಸಭಾದಕ್ಷಕರು ಅಧಿಕಾರ ಹೊಂದಿರುವದಾಗಿ ಮಹಾ ಹಕ್ಕುಸಾಧಿಸುತ್ತಿದ್ದರು –

**"ಆಗ ಪರಲೋಕದಲ್ಲಿ ಮಹಾ ಶಬ್ದವನ್ನು ಕೇಳಿದೆನು"**

ಈಗ ನಾವು ಅವರು ಹಕ್ಕುಸಾಧಿಸುವ ಕೆಲವನ್ನು ನೋಡೋಣ –

**"ಈಗ ಜಯವೂ ಶಕ್ತಿಯೂ"**

ಇದು ರೋಮ್ನ ಸಭಾದಕ್ಷಕನು ರೋಮನ್ ಸಾಮ್ರಾಜ್ಯದೊಂದಿಗೆ ಹೋರಾಡಿ ಜಯವನ್ನು ಹೊಂದಿ, ಪೊಂತಿಫೆಕ್ಸ್ ಮ್ಯಾಕ್ಸಿಮಸ್ ಎಂಬ ಅಧಿಕಾರವನ್ನು ಪಡೆದ ನಂತರ ಉಂಟಾದ ಪ್ರತಿಕ್ರಿಯೆಯನ್ನು ಸೂಚಿಸುತ್ತದೆ.

**"ರಾಜ್ಯವೂ ಆತನು ಅಭಿಷೇಕಿಸಿದವನ ಅಧಿಕಾರವೂ"**

ಇದು "**ದೇವರ ರಾಜ್ಯವು**" ಪೋಪ್ ಅವರದ್ದೇ ಎಂದು ಹಕ್ಕುಸಾಧಿಸುವದನ್ನು ಸೂಚಿಸುತ್ತದೆ ಮತ್ತು ಅವರೇ 1000 ವರ್ಷಗಳು ಕ್ರಿಸ್ತನೊಂದಿಗೆ ಆಳ್ವಿಕೆ ಮಾಡುವವರು ಎಂದು ಹಕ್ಕುಸಾಧಿಸುವದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಕಟನೆ 20:4**

**"ಅವರು ಜೀವಿತರಾಗಿ ಎದ್ದು ಸಾವಿರ ವರುಷ ಕ್ರಿಸ್ತನೊಂದಿಗೆ ಆಳಿದರು."**

ಆದ್ದರಿಂದ ಪೋಪ್ ವ್ಯವಸ್ಥೆಯು ಕ್ರಿ.ಶ 799ರಿಂದ ಕ್ರಿ.ಶ.1799 ವರೆಗೆ 1000 ವರ್ಷಗಳು "ಕ್ರಿಸ್ತನ ಅಧಿಕಾರ"ವನ್ನು ಚಲಾವಣೆ ಮಾಡುವದನ್ನು ಕುರಿತು ಹಕ್ಕುಸಾಧಿಸುತ್ತಾರೆ.

**"ಹಗಲಿರುಳು ನಮ್ಮ ಸಹೋದರರ ಮೇಲೆ ನಮ್ಮ ದೇವರ ಮುಂದೆ ದೂರು ಹೇಳಿದ ದೂರುಗಾರನು ದೊಬ್ಬಲ್ಪಟ್ಟಿದ್ದಾನೆ."**

ಇದು ರೋಮನ್ ಸಾಮ್ರಾಜ್ಯವು ಧಾರ್ಮಿಕ ಹತೋಟಿಯ ಅಧಿಕಾರದಿಂದ ಬಿದ್ದು ಹೋದಾಗ ಪೋಪ್ ವ್ಯವಸ್ಥೆ ಮಾಡಿದ ಪ್ರತಿಕ್ರಿಯೆಯನ್ನು ಸೂಚಿಸುತ್ತದೆ.

"**ನಮ್ಮ ಸಹೋದರರ ಮೇಲೆ ದೂರು ಹೇಳಿದ ದೂರುಗಾರನು**" ಎಂಬ ವಾಕ್ಯವು ಇದಕ್ಕೆ ಮುಂಚೆ ರೋಮನ್ ಸಾಮ್ರಾಜ್ಯವು ಸಭೆಗೆ ವಿರೋಧವಾಗಿ ಬಹು ಕಾಲದಿಂದ ಹಿಂಸೆಪಡಿಸುತ್ತಿದ್ದನ್ನು ಸೂಚಿಸುತ್ತದೆ.

**"ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂತೆಗೆಯದೆ ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು ಜಯಿಸಿದರು."**

ಇವೆಲ್ಲವನ್ನೂ ಪೋಪ್ ವ್ಯವಸ್ಥೆ ಹಕ್ಕುಸಾಧಿಸಿ ತೋರಿಸುವದೇನೆಂದರೆ ಅವರು ಆ ಬಲವನ್ನು ದೈವೀಕ ಅಧಿಕಾರ ಮತ್ತು ಬಲದಿಂದ ಪಡೆದುಕೊಂಡಿದ್ದಾರೆ ಎಂದು ಹೇಳುತ್ತಾರೆ!!

ಈ ವಾಕ್ಯವು ಪೋಪ್ ವ್ಯವಸ್ಥೆ ಹುತಾತ್ಮವನ್ನು ಕುರಿತು ಸಹ ಮಾತನಾಡುತ್ತದೆ –

**"ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂತೆಗೆಯದೆ"**

ನಿಜವಾಗಿಯೂ! ಅನೇಕ "ಸಂತರು" ಈ ಪೋಪ್ ವ್ಯವಸ್ಥೆಯನ್ನು ಸ್ಥಾಪಿಸಿ ಅದನ್ನು ಎತಿಹಿಡಿಯುವದಕ್ಕಾಗಿ ತಮ್ಮ ಜೀವವನ್ನು ತೊರೆದಿದ್ದಾರೆ.

**"ಪರಲೋಕವೇ, ಅದರಲ್ಲಿ ವಾಸಮಾಡುವವರೇ, ಹರ್ಷಗೊಳ್ಳಿರಿ"**

ಇದು ಮಹಿಮೆ ಮತ್ತು ಅಧಿಕಾರಕ್ಕೆ ಬರಲಿರುವ ಪೋಪ್ ವ್ಯವಸ್ಥೆಯ ಕಾಲವನ್ನು ಸೂಚಿಸುತ್ತದೆ –

**"ಪರಲೋಕವೇ"**

ಅಥವಾ ಇದು ಆತ್ಮೀಕ ಹತೋಟಿಯನ್ನು ಸೂಚಿಸುತ್ತದೆ!

ಅವರು ಸಂತಸ ಹೊಂದುವದಕ್ಕೆ ಇನ್ನೊಂದು ಕಾರಣವೇನೆಂದರೆ –

**"ಅದರಲ್ಲಿ ವಾಸಮಾಡುವವರೇ"**

ಇದು ಪೋಪ್ ವ್ಯವಸ್ಥೆಯ ವಿಭಾಗದವರನ್ನು ಸೂಚಿಸುತ್ತದೆ –

ಅದರ ವಾರಸುದಾರರಾದ ಕಾರ್ಡಿನಲ್ಸ್, ಪ್ರಧಾನ ಸಭಾಧ್ಯಕ್ಷಕರು, ಸಭಾಧ್ಯಕ್ಷಕರು, ಫಾದರ್ಸ್ ಮತ್ತು ನನ್ಸ್ ಇತರೆ.

**"ಭೂಮಿಯೇ, ಸಮುದ್ರವೇ, ನಿಮ್ಮ ದುರ್ಗತಿಯನ್ನು ಏನು ಹೇಳಲಿ"**

ಇದು ಪೋಪ್ ವ್ಯವಸ್ಥೆಯು ಆಳ್ವಿಕೆ ಮಾಡುವದರಿಂದ ಭೂಮಿಗೆ ಉಂಟಾಗುವ "ದುರ್ಗತಿ"ಯನ್ನು ಸೂಚಿಸುತ್ತದೆ –

"ಭೂಮಿ" – ವ್ಯವಸ್ಥಿತವಾದ ನಾಗರೀಕ ಸಮಾಜವನ್ನು ಸೂಚಿಸುತ್ತದೆ.

"ಸಮುದ್ರ" – ಇದು ಕ್ರೈಸ್ತ ನಂಬಿಕೆಯು ಪ್ರವೇಶಿಸದ ಅನಾಗರಿಕ ಜನರ ಸಮೂಹವನ್ನು ಸೂಚಿಸುತ್ತದೆ.

"ದುರ್ಗತಿ" ಎಂದರೆ "ಕ್ರುಸೇಡ್" ಎಂದು ಕರೆಯಲ್ಪಡುವ ಶಿಲುಬೆಯ ಭಾವುಟದಡಿ ಮಾಡುವ ಹೋರಾಟಗಳನ್ನು ಸೂಚಿಸುತ್ತದೆ.

ಅನೇಕ ರೀತಿಯಾದ ಚಿತ್ರಹಿಂಸೆ ಮತ್ತು ರಕ್ತಸುರಿಸುವಿಕೆಯ ಮುಖಾಂತರ ಈ ಪೋಪ್ ಆಳ್ವಿಕೆಯು ಜನರ ಮೇಲೆ ಬಲವಂತವಾಗಿ ಮತಾಂತರವನ್ನು ಮಾಡಲಾಯಿತು.




ಕೊನೆಯದಾಗಿ ನಾವು ಹೀಗೆ ಓದುತ್ತೇವೆ –

**"ಸೈತಾನನು ತನಗಿರುವ ಕಾಲವು ಸ್ವಲ್ಪವೆಂದು ತಿಳಿದು ಮಹಾ ರೌದ್ರವುಳ್ಳವನಾಗಿ ನಿಮ್ಮ ಕಡೆಗೆ ಇಳಿದುಬಂದಿದ್ದಾನೆ"**

ಇದು ಬಹುಶಃ "ನಿಮ್ಮ" ವರ್ಗವನ್ನು ಸೂಚಿಸುತ್ತದೆ –

ಇದರ ಅರ್ಥವೇನೆಂದರೆ ಇದು ನಿಜವಾದ ಸಭೆಯಾಗಿದೆ ಮತ್ತು ಹೇಗೆ

ಸೈತಾನನು ಸಭೆಯನ್ನು ನಾಶಮಾಡಲು ಅಪಾಯಕರವಾದ ಮತ್ತು ತೀವ್ರ ಪರಿಣಾಮಕರವಾದ ಉಪಾಯವನ್ನು ಮಾಡುತ್ತಾನೆ.

**ಇದು ಈ ಕಾಲದ ನಂತರ ಭವಿಷ್ಯದಲ್ಲಿ ಸಭೆಯು ಏನ್ನನ್ನು ನಿರೀಕ್ಷಿಸಬಹುದೆಂಬುದಕ್ಕೆ ಪ್ರವಾದನಾ ಎಚ್ಚರಿಕೆಯಾಗಿದೆ.**

ನಂತರ ನಾವು ಹೀಗೆ ಓದಿ ಮುಂದುವರಿಯುತ್ತೇವೆ –

**ಪ್ರಕಟನೆ 12:13**

**"ಘಟಸರ್ಪನು ತಾನು ದೊಬ್ಬಲ್ಪಟ್ಟು ಭೂಮಿಗೆ ಬಿದ್ದಿರುವದನ್ನು ಕಂಡು ಗಂಡು ಮಗುವನ್ನು ಹೆತ್ತ ಸ್ತ್ರೀಯನ್ನು ಹಿಂಸಿಸುವದಕ್ಕೆ ಅಟ್ಟಿಸಿಕೊಂಡು ಹೋದನು."**

ಇಲ್ಲಿ "ಘಟಸರ್ಪವು" (ನಾಗರೀಕ ಅಧಿಕಾರ) ಆತ್ಮೀಕ ಹತೋಟಿಯನ್ನು ಕಳೆದುಕೊಂಡಿದ್ದರಿಂದ ಗೂಢವಾದ ಪೋಪ್ ವ್ಯವಸ್ಥೆ ಆ "ಸ್ತ್ರೀ" ಅಥವಾ ನಿಜವಾದ ಸಭೆಯನ್ನು ಘೋರವಾಗಿ ಚಿತ್ರಹಿಂಸೆಮಾಡಲು ಉಪಯೋಗಿಸಲ್ಪಟ್ಟಿತು.

........ಇದನ್ನು "ಇನ್ಕ್ವಿಸಿಶನ್"

**("THE INQUISITION")**

ಎಂದು ಕರೆಯಲಾಗುತ್ತದೆ (ದಾನಿಯೇಲನು 7:21,25)

ಇಲ್ಲಿಯೇ ಪೋಪ್ ವ್ಯವಸ್ಥೆಯು ಯೂರೋಪಿನಲ್ಲಿ ನಾಗರೀಕ ಅಧಿಕಾರಿಗಳನ್ನು ಸಾಧನವಾಗಿ ಉಪಯೋಗಿಸಿಕೊಂಡು ಸಭೆಯನ್ನು ಚಿತ್ರಹಿಂಸೆ ನೀಡಿ ಸತ್ಯವೇದವನ್ನು ನಂಬುವ ಕ್ರೈಸ್ತರನ್ನು ಸಾಮೂಹಿಕ ಸಂಹಾರ ಮಾಡಿದರು.

ನಂತರ ನಾವು ಹೀಗೆ ಓದುತ್ತೇವೆ –

**ಪ್ರಕಟನೆ 12:14**

**"ಆ ಸ್ತ್ರೀಯು ಅರಣ್ಯದಲ್ಲಿದ್ದ ತನ್ನ ಸ್ಥಳಕ್ಕೆ ಹಾರಿಹೋಗುವದಕ್ಕಾಗಿ ಆಕೆಗೆ ದೊಡ್ಡ ಗರುಡಪಕ್ಷಿಯ ಎರಡು ರೆಕ್ಕೆಗಳು ಕೊಡಲ್ಪಟ್ಟವು. ಅಲ್ಲಿ ಒಂದು ಕಾಲ, ಎರಡು ಕಾಲ, ಅರ್ಧಕಾಲ ಸರ್ಪನ ಮುಖಕ್ಕೆ ಮರೆಯಾಗಿ ಪೋಷಣೆ ಹೊಂದುತ್ತಾಳೆ."**

ಇಲ್ಲಿ "ಸ್ತ್ರೀ" ಅಥವಾ ನಿಜವಾದ ಸಭೆ ಆ ಕಾಲದಲ್ಲಿ ದೇವರ ದೈವೀಕ ಅನುಗ್ರಹ ಹೊಂದಿರುವದನ್ನು ತೋರಿಸಲಾಗಿದೆ –

“ಒಂದು ಕಾಲ, ಎರಡು ಕಾಲ, ಅರ್ಧ ಕಾಲ”

**ಅಥವಾ 1 ವರ್ಷ + 2 ವರ್ಷ + ½ ವರ್ಷ = “3½ ಪ್ರವಾದನಾ ವರ್ಷಗಳು”**

.....ಅಥವಾ ಕ್ರಿ.ಶ 539ರಿಂದ ಕ್ರಿ.ಶ.1799 ಕಾಲಗಳು.

**(1260 ನೇರವಾದ ವರ್ಷಗಳು ಅಥವಾ "42 ಪ್ರವಾದನಾ ತಿಂಗಳು.")**



**“ಪೋಷಣೆ ಹೊಂದುತ್ತಾಳೆ”**

ಇದು ಹೊಸ ಸೃಷ್ಟಿಗಳಿಗೆ ಆತ್ಮೀಕವಾಗಿ ಪೋಷಿಸುವುದನ್ನು ಸೂಚಿಸುತ್ತದೆ.....

**“ಹದ್ದಿನ ಎರಡು ರೆಕ್ಕೆಗಳು”**

ದೇವರ ವಾಕ್ಯವಾದ ಹಳೆಯ ಮತ್ತು ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ.

**“ಅರಣ್ಯ”**

ಇದು ಏಕಾಂತತೆ ಮತ್ತು ಬೇರ್ಪಟ್ಟ ಸ್ಥಿತಿಯನ್ನು ಸೂಚಿಸುತ್ತದೆ.

**ಹೌದು! ನಿಜವಾದ ಸಭೆಯು ಕ್ರಿಸ್ತವಿರೋಧಿಯ ಎಲ್ಲಾ ವಿಧವಾದ ಚಟುವಟಿಕೆಯಿಂದ ತನ್ನನ್ನೇ ಬೇರ್ಪಡಿಸಿಕೊಂಡಿದೆ!**

ನಂತರ ನಾವು ಹೀಗೆ ಓದುತ್ತಾ ಮುಂದುವರಿಯುತ್ತೇವೆ –

## ಪ್ರಕಟನೆ 12:15-16

**“ಆ ಸ್ತ್ರೀಯನ್ನು ಪ್ರವಾಹವು ಬಡಕೊಂಡು ಹೋಗಬೇಕೆಂದು ಆಕೆಯ ಹಿಂದೆ ಸರ್ಪವು ತನ್ನ ಬಾಯೊಳಗಿಂದ ನೀರನ್ನು ಪ್ರವಾಹದಂತೆ ಬಿಟ್ಟಿತು. ಆದರೆ ಭೂಮಿಯು ಆ ಸ್ತ್ರೀಯ ಸಹಾಯಕ್ಕೆ ಬಂದು ತನ್ನ ಬಾಯಿ ತೆರೆದು ಘಟಸರ್ಪನು ತನ್ನ ಬಾಯೊಳಗಿಂದ ಬಿಟ್ಟ ಪ್ರವಾಹವನ್ನು ಕುಡಿದುಬಿಟ್ಟಿತು.”**

ಇಲ್ಲಿ ಈ ವಾಕ್ಯವನ್ನು ಪ್ರವಾದನಾ ಚಿತ್ರಣದ ಸಾಂಕೇತಿಕ ಭಾಷೆಯಲ್ಲಿ ನೀಡಲಾಗಿದೆ. ಇದು ಹದಿನೆಂಟನೆ ಶತಮಾನದ ಫ್ರೆಂಚ್ ಕ್ರಾಂತಿಯನ್ನು ಸೂಚಿಸುತ್ತದೆ.

**(French revolution)**



**“ಸರ್ಪ”**

ಇದು ಕ್ರಿಸ್ತವಿರೋಧಿ ವ್ಯವಸ್ಥೆಯ ತಲೆ (ಮುಖ್ಯಸ್ತ)ಯಾದ ಸೈತಾನನನ್ನು (**ಆದಿಕಾಂಡ** 3:13) ಸೂಚಿಸುತ್ತದೆ.

**“ನೀರು”**

ಎಲ್ಲರಿಗೂ ತಿಳಿದಿರುವಂತೆ ಸತ್ಯವೇದದಲ್ಲಿ "ನೀರು" ಸತ್ಯಕ್ಕೆ ಸಾಂಕೇತಿಕವಾಗಿದೆ (ಪ್ರಕಟನೆ 22:17)


**ಇಲ್ಲಿ ನಿಜವಾಗಿ ಏನು ನಡೆಯಿತು?**

**ಸೈತಾನನು ಸತ್ಯವನ್ನು ಹೊರತರಲು ಹುಡುಕಿದನೆ???**

ಹೌದು! ಸೈತಾನನು, ತನ್ನ ತಂತ್ರಗಳನ್ನು ಬದಲಾಯಿಸುವುದರ ಮೂಲಕ ನಿರ್ಧಿಷ್ಟವಾದ ಸತ್ಯಗಳು

**"ಜಲಪ್ರವಾಹದಂತೆ"**


ಹೊರಬಂದು ಯಾಜಕತಂತ್ರ (PRIESTCRAFT) ಮತ್ತು ರಾಜತಂತ್ರ (KINGCRAFT ) ಮತ್ತು ಜನರ ವೈಯಕ್ತಿಕ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು ಇದರ ಪರಿಣಾಮವಾಗಿ ನಿಜವಾದ ಸಭೆಗೆ ಹೇಗೋ ದೊಡ್ಡ ಗಳಿಬಿಲಿ ಮತ್ತು ನಷ್ಟ ಉಂಟಾಗಬೇಕೆಂದು ಅಂದುಕೊಂಡನು!



VOLTAIRE

ಈ ಸತ್ಯಗಳನ್ನು ಬರೆದವರು ವೋಲ್ಟೇರ್ (Voltaire) ಮತ್ತು ಜೀನ್ ಜಾಕ್ವಸ್ ರೂಸ್ಯೋ (Jean Jacques Rousseau). ಇವರು ಫ್ರಾನ್ಸ್ ದೇಶಕ್ಕೆ ಸೇರಿದವರಾಗಿದ್ದು ಸ್ವತಃ ಇವರಿಗೇ ಸತ್ಯವೇದದಲ್ಲಿ ಯಾವುದೇ ನಿಜವಾದ ನಂಬಿಕೆಯಿರಲಿಲ್ಲ.

ಅವರು ಸೈತಾನನಿಂದ ಉಪಯೋಗಿಸಲ್ಪಟ್ಟ ಸಾಧನಗಳಾಗಿದ್ದರು.



JEAN JACQUES ROUSSEAU

ಆದರೆ ಈ ಸತ್ಯಗಳು ( "ಪ್ರವಾಹವನ್ನು" )

**"ಭೂಮಿ"** ಅಥವಾ ಸಮಾಜವು ಹೀರಿಕೊಂಡಿತು ಮತ್ತು ಸ್ವೀಕರಿಸಿಕೊಂಡಿತು.

ಮತ್ತು ಇದರ ಪರಿಣಾಮವಾಗಿ ಫ್ರೆಂಚ್ ಕ್ರಾಂತಿ ಉಂಟಾಗಿ, ಪೋಪ್ ವ್ಯವಸ್ಥೆಯ ಆಳ್ವಿಕೆಯು 1799ರಲ್ಲಿ ಅಂತ್ಯಗೊಂಡಿತು! ಮತ್ತು ನಂತರ ಕೊನೆಯದಾಗಿ ನಾವು ಹೀಗೆ ಓದುತ್ತೇವೆ –

**ಪ್ರಕಟನೆ 12:17**

**"ಆಗ ಘಟಸರ್ಪನು ಸ್ತ್ರೀಯ ಮೇಲೆ ಕೋಪಿಸಿಕೊಂಡು ಆಕೆಯ ಸಂತಾನದವರಲ್ಲಿ ಉಳಿದವರ ಮೇಲೆ ಅಂದರೆ ದೇವರ ಆಜ್ಞೆಗಳನ್ನು ಕೈಕೊಂಡು ನಡೆದು ಯೇಸು ಕ್ರಿಸ್ತನ ವಿಷಯವಾದ ಸಾಕ್ಷಿಯನ್ನು ಹೇಳುವವರ ಮೇಲೆ ಯುದ್ಧ ಮಾಡುವದಕ್ಕೆ ಹೊರಟನು."**

ಕೊನೆಯದಾಗಿ, ಈ ಪ್ರವಾದನೆಯಲ್ಲಿ ಹೇಗೆ ಸೈತಾನನು ತನ್ನ ಮಧ್ಯವರ್ತಿಗಳಾದ ಪೋಪ್ ವ್ಯವಸ್ಥೆಯ ಮೂಲಕ ಮತ್ತು ಸಾಮಾಜಿಕ ಅಧಿಕಾರಿಗಳ ಮೂಲಕ ಈ ಸುವಾರ್ತಾಯುಗದ ಅಂತ್ಯದವರೆಗೂ ನಿಜವಾದ ಸಭೆಯನ್ನು (ಆಕೆಯ ಸಂತಾನದವರಲ್ಲಿ ಉಳಿದವರ) ಮೇಲೆ ಚಿತ್ರ ಹಿಂಸೆ ಕೊಡಲು ("ಯುದ್ಧಮಾಡುವದಕ್ಕೆ") ಹುಡುಕುತ್ತಾನೆಂಬದಕ್ಕೆ ಚಿತ್ರಣವಾಗಿದೆ.

**ಆದ್ದರಿಂದ ನಾವು ಈ ಪ್ರವಾದನೆಯಲ್ಲಿ ಕ್ರಿಸ್ತವಿರೋಧಿ ವ್ಯವಸ್ಥೆಯ ಹುಟ್ಟುವಿಕೆ ಮತ್ತು ಬೆಳವಣಿಗೆಯನ್ನು ಕುರಿತು ಸ್ಪಷ್ಟವಾದ ಮತ್ತು ಆಳವಾದ ವಿವರಣೆಯನ್ನು ನೋಡಿದ್ದೇವೆ.**

ಈಗ ನಾವು ಪೋಪ್ ವ್ಯವಸ್ಥೆಯ ಇನ್ನೊಂದು ಪ್ರವಾದನೆಯನ್ನು ಕುರಿತು ನೋಡೋಣ –

**ಪ್ರಕಟನೆ 13:1-3**

"ಆಗ ನಾನು ಸಮುದ್ರದ ಮರಳಿನ ಮೇಲೆ ನಿಂತೆನು, ಸಮುದ್ರದೊಳಗಿಂದ ಮೃಗವು ಏರಿ ಬರುವದನ್ನು ಕಂಡೆನು. ಅದಕ್ಕೆ ಏಳು ತಲೆಗಳೂ ಹತ್ತು ಕೊಂಬುಗಳೂ ಕೊಂಬುಗಳ ಮೇಲೆ ಹತ್ತು ಕಿರೀಟಗಳೂ ತಲೆಗಳ ಮೇಲೆ ದೂಷಣೆಯ ನಾಮವೂ ಇದ್ದವು. ನಾನು ಕಂಡ ಮೃಗವು ಚಿರತೆಯಂತಿತ್ತು; ಅದರ ಕಾಲುಗಳು ಕರಡಿಯ ಕಾಲುಗಳಂತೆಯೂ ಅದರ ಬಾಯಿ ಸಿಂಹದ ಬಾಯಂತೆಯೂ ಇದ್ದವು; ಅದಕ್ಕೆ ಘಟಸರ್ಪವು ತನ್ನ ಶಕ್ತಿಯನ್ನೂ ತನ್ನ ಆಸನವನ್ನು ಮಹಾ ಅಧಿಕಾರವನ್ನೂ ಕೊಟ್ಟಿತು. ಅದರ ತಲೆಗಳಲ್ಲಿ ಒಂದು ಗಾಯ ಹೊಂದಿ ಸಾಯುವಹಾಗಿರುವದನ್ನು ನಾನು ಕಂಡೆನು. ಮರಣಕರವಾದ ಆ ಗಾಯವು ವಾಸಿಯಾಯಿತು; ಆಗ ಭೂಲೋಕದವರೆಲ್ಲರು ಆ ಮೃಗದ ವಿಷಯವಾಗಿ ಆಶ್ಚರ್ಯಪಟ್ಟರು."



ಇದು ಮತ್ತೆ ಪೋಪ್ ವ್ಯವಸ್ಥೆ ಒಂದು "**ಮೃಗ**"ಕ್ಕೆ ಸಾಂಕೇತಿಕವಾಗಿದ್ದು ರಾಜ್ಯ ಅಥವಾ ಅರಸಾಳ್ವಿಕೆಯ ಚಿತ್ರಣವಾಗಿದೆ ಎಂದು ದಾನಿಯೇಲನು 7ನೇ ಅಧ್ಯಾಯದಲ್ಲಿ ನೋಡುತ್ತೇವೆ.

ಇಲ್ಲಿ ನಾವು ಇದರ ಸಂಕೇತಗಳ ಅರ್ಥಗಳನ್ನು ಹೀಗೆ ನೋಡುತ್ತೇವೆ –

**"ಏಳು ತಲೆಗಳೂ ಹತ್ತು ಕೊಂಬುಗಳೂ"**

ಇದು ಪರಿಚಯವಾದ ರೋಮನ್ ಅರಸಾಳ್ವಿಕೆಯ ಸಂಕೇತವಾಗಿದೆ (ಪ್ರಕಟನೆ 12:3)

ಹೌದು! ಪೋಪ್ ವ್ಯವಸ್ಥೆ (Papacy) ರೋಮನ್ ಸಾಮ್ರಾಜ್ಯದ ಮೂಲಕ ಮಾತ್ರವೇ ಅಧಿಕಾರಕ್ಕೆ ಬಂದಿತು!!

**"ಕೊಂಬುಗಳ ಮೇಲೆ ಹತ್ತು ಮಕುಟಗಳೂ ತಲೆಗಳ ಮೇಲೆ ದೇವದೂಷಣ ನಾಮಗಳೂ ಇದ್ದವು."**

ಇದು ಆ ಹತ್ತು ವಿಭಾಗಗಳು ಹೇಗಿದ್ದವು ಎಂಬುದಕ್ಕೆ ಸಾಂಕೇತಿಕವಾಗಿದೆ. ಯೂರೋಪ್ ನಲ್ಲಿರುವ ರೋಮ್ ನ ("ಹತ್ತು ಕೊಂಬುಗಳು") ಕ್ರಮೇಣವಾಗಿ ಬೆಳೆದು ಕ್ರಿಸ್ತನ ರಾಜ್ಯಗಳು ಎಂದು ಹಕ್ಕು ಸಾಧಿಸಿತು – ಕ್ರೈಸ್ತ ಪ್ರಪಂಚ!

ಇದು ದೇವದೂಷಣೆಯಾಗಿತ್ತು ಏಕೆಂದರೆ ಅವರು ಸತ್ಯದ ವಿಷಯದಲ್ಲಿ ಎಂದಿಗೂ ನಿಜವಾದ ಕ್ರೈಸ್ತರಾಜ್ಯವಾಗಿರಲಿಲ್ಲ ಆದರೆ ಸುಮ್ಮನೆ ಹಾಗೆ ಹಕ್ಕುಸಾಧಿಸುತ್ತಿದ್ದರು –

ಕಪಟವಾಗಿ, ಕ್ರಿಸ್ತನ ನಾಮವನ್ನು ಸುಳ್ಳಾಗಿ ಉಪಯೋಗಿಸುತ್ತಿದ್ದರು!

ನಂತರ ಎರಡನೆಯ ವಾಕ್ಯದಲ್ಲಿ ಪೋಪ್ ವ್ಯವಸ್ಥೆಯ ಅಧಿಕಾರ ಅಥವಾ ಈ ಪೋಪ್ ರಾಜ್ಯದ ಗುಣಲಕ್ಷಣವನ್ನು ಕುರಿತು ವಿವರಿಸುತ್ತದೆ.

ಈಗ ನಾವು ಇಲ್ಲಿ ಉಪಯೋಗಿಸಿರುವ ಸಂಕೇತಗಳ ವಿವರಣೆಯನ್ನು ಕುರಿತು ನೋಡೋಣ –

## "ನಾನು ಕಂಡ ಮೃಗವು ಚಿರತೆಯಂತಿತ್ತು"



ಇದು ಗ್ರೀಕ್ ಸಾಮ್ರಾಜ್ಯವನ್ನು ಸೂಚಿಸುವದಕ್ಕಾಗಿ ಉಪಯೋಗಿಸಲಾಗಿದೆ ಎಂದು ದಾನಿಯೇಲನು 7:6 ರಲ್ಲಿ ನೋಡುತ್ತೇವೆ.

## ಯಾವ ರೀತಿಯಲ್ಲಿ ಪೋಪ್ ರಾಜ್ಯವು "ಚಿರತೆ" ಅಥವಾ ಗ್ರೀಕ್ ಸಾಮ್ರಾಜ್ಯದ ಹಾಗಿದೆ?

ಗ್ರೀಕರನ್ನು ಕುರಿತು ನಾವು ಹೀಗೆ ಓದುತ್ತೇವೆ –

**ಅಪೋಸ್ತಲರ ಕೃತ್ಯಗಳು 17:22**

**"ಪೌಲನು ಅರಿಯೊಪಾಗದ ಮಧ್ಯದಲ್ಲಿ ನಿಂತುಕೊಂಡು ಹೇಳಿದ್ದೇನೆಂದರೆ - ಅಥೇನೆಯ ಜನರೇ, ನೀವು ಎಲ್ಲಾದರಲ್ಲೂ ಅತಿಭಕ್ತಿವಂತರೆಂದು (ಧಾರ್ಮಿಕರು-ಎನ್.ಐ.ವಿ) ನನಗೆ ತೋರುತ್ತದೆ."**




ಹೌದು! ಪೋಪ್ ವ್ಯವಸ್ಥೆಯೂ ಸಹ ಬಹಳ ಧಾರ್ಮಿಕ ಭಾವವನ್ನು ತೋರಿಸುತ್ತಿದ್ದರು. ಅವರ ಪಾದ್ರಿಗಳು ಮತ್ತು ನನ್ಗಳು ಸನ್ಯಾಸತ್ವವನ್ನು ಪಾಲಿಸುತ್ತಿದ್ದರು.

ಇದಲ್ಲದೆ ಚಿರತೆಯಲ್ಲಿ ಕಾಣುವ "ಚುಕ್ಕಿ"ಗಳು ಕ್ರಮವಿಲ್ಲದಿರುವದು
ಬೇರೆ ಬೇರೆ ದೇಶಗಳಲ್ಲಿ ಪರಿಸ್ಥಿತಿಗೆ ತಕ್ಕಂತೆ ಕಾರ್ಯನೀತಿಗಳನ್ನು
ಈ ಪೋಪ್ ವ್ಯವಸ್ಥೆಯು ಬದಲಾಯಿಸುತ್ತಿದ್ದರು.

ಉದಾಹರನೆ: ಹೇಗೆ ಭಾರತದಲ್ಲಿ ಹಿಂದೂ ಪದ್ಧತಿಯಲ್ಲಿ ಮಾಟಮಂತ್ರ
ಅನುಸರಿಸುತ್ತಾರೋ ಹಾಗೆಯೇ ಫಿಲಿಫೀನ್ಸ್‌ನಲ್ಲಿ
ಮಾಟಮಂತ್ರಗಳ ಆಚಾರ ವಿಚಾರಗಳನ್ನು ಅಂಗೀಕರಿಸಲ್ಪಟ್ಟಿತ್ತು, ಇತರೆ.

**"......ಅದರ ಕಾಲುಗಳು ಕರಡಿಯ ಕಾಲುಗಳಂತೆಯೂ....."**



ಇಲ್ಲಿ "ಕರಡಿ"ಯು ಮೆದೊ
ಪರ್ಷೀಯ ಸಾಮ್ರಾಜ್ಯವನ್ನು
ಸೂಚಿಸುತ್ತದೆ
ಎಂದು **ದಾನಿಯೇಲನು** 7:5ರಲ್ಲಿ
ನೋಡುತ್ತೇವೆ.

**ಯಾವ ರೀತಿಯಲ್ಲಿ ಪೋಪ್ ರಾಜ್ಯದ "ಕಾಲುಗಳು" "ಕರಡಿ" ಅಥವಾ ಮೆದೊಪರ್ಷಿಯನ್ ಸಾಮ್ರಾಜ್ಯದ ಹಾಗಿತ್ತು?**

ಮೆದೊಪರ್ಷಿಯನರು ಮತ್ತಿಗೆಹಾಕುವ ಕುಶಲತೆಗಳು ಮತ್ತು ಛಲ ಮತ್ತು
ಯುದ್ಧಕೌಶಲ್ಯತೆಗಳಲ್ಲಿ ಹೆಸರುವಾಸಿಯಾಗಿದ್ದರು!

ಪೋಪ್ ವ್ಯವಸ್ಥೆಯು ಅದರ "ಕಾಲು"ಗಳಿಗೆ ಇದೇ ರೀತಿಯಾದ ವಿಧಾನಗಳನ್ನು
ಉಪಯೋಗಿಸುತ್ತಿದ್ದರು –
ಅಂದರೆ ಇಡೀ ದಶಕಗಳಿಂದ ಅಧಿಕಾರವನ್ನು ಹೊಂದಿ ಅದನ್ನು ಉಳಿಸಿಕೊಳ್ಳುತ್ತಿದ್ದರು.
ಹೌದು! ಸ್ಥಿರವಾಗಿ "ನಿಲ್ಲುವದಕ್ಕೆ" ಹೀಗೆ ಮಾಡುತ್ತಿದ್ದರು!

**"ಅದರ ಬಾಯಿ ಸಿಂಹದ ಬಾಯಂತೆಯೂ ಇದ್ದವು"**

ಇಲ್ಲಿ "ಸಿಂಹವು" ಬಾಬೆಲಿನ ಸಾಮ್ರಾಜ್ಯವನ್ನು ಸೂಚಿಸುತ್ತದೆ



ಎಂದು ದಾನಿಯೇಲನು 7:4ರಲ್ಲಿ ನೋಡುತ್ತೇವೆ.

ಈಗ ಬಾಬೆಲ್ ಸಾಮ್ರಾಜ್ಯವು ಮಹತ್ವ ಮತ್ತು ಮಹಿಮೆಗೆ ಹೆಸರಾಗಿತ್ತು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ದಾನಿಯೇಲನು 4:22**
**"ನಿನ್ನ ಮಹಿಮೆಯು ವೃದ್ಧಿಯಾಗಿ ಆಕಾಶಕ್ಕೆ ಮುಟ್ಟಿದೆ, ನಿನ್ನ ಆಳ್ವಿಕೆಯೂ ಲೋಕದ ಕಟ್ಟಕಡೆಗೂ ವ್ಯಾಪಿಸಿದೆ."**

ಆದರೆ ಇಲ್ಲಿ ಪೋಪ್ ವ್ಯವಸ್ಥೆಯ ಮಹತ್ವ ಮತ್ತು ಮಹಿಮೆಯು ಬರೀ "ಬಾಯಿ" ಮಾತು ಅಥವಾ ಅವರು ಹಕ್ಕು ಸಾಧಿಸುವದನ್ನು ಸೂಚಿಸುತ್ತದೆ!!

ಹೌದು! ದೈವೀಕ ಅಧಿಕಾರದ ಮಹಿಮೆ ಮತ್ತು ಗೌರವದ ಹಕ್ಕು ಸಾಧನೆ!!

ಕ್ರಿಸ್ತ ವಿರೋಧಿ ಭಾಗ–2 ರಲ್ಲಿ ನಾವು ನೋಡಿದ 62 ದೇವದೂಷಕ ಶಿರೋನಾಮೆಯನ್ನು ಜ್ಞಾಪಿಸಿಕೊಳ್ಳಿರಿ!

**"ಅದಕ್ಕೆ ಘಟಸರ್ಪನು ಶಕ್ತಿಯನ್ನೂ ಸಿಂಹಾಸನವನ್ನೂ ಮಹಾ ಅಧಿಕಾರವನ್ನೂ ಕೊಟ್ಟನು."**

ಇದು ಹೇಗೆ ಪೋಪ್ ವ್ಯವಸ್ಥೆಯು "ಘಟಸರ್ಪ"ನಿಂದ ಅದರ ಅಧಿಕಾರವನ್ನು ಪಡೆದು ಕೊಂಡಿತು ಎಂಬುದರ ಸಾಂಕೇತಿಕ ಚಿತ್ರಣವಾಗಿದೆ.


ವಿಗ್ರಹ ಆರಾಧಕರಾದ ರೋಮನ್ ಸಾಮ್ರಾಜ್ಯದ ಮೂಲಕ ಅಂದರೆ

ಚಕ್ರಾದಿಪತಿಗಳಾದ ಕಾನ್ಸ್ಟಂಟೈನ್ ಮತ್ತು ಜಸ್ಟೀನಿಯನ್.

ಮತ್ತು ಪ್ರಧಾನ ಅಧಿಕಾರದ ಪದವಿ ಏನೆಂದರೆ

**"ಪೊಂತಿಫೆಕ್ಸ್ ಮ್ಯಾಕ್ಸಿಮಸ್"**



ರೋಮನ್ ಸಾಮ್ರಾಜ್ಯದ ಎಲ್ಲಾ ಆತ್ಮೀಕ ವಿಷಯಗಳ ಪ್ರಮುಖ ಅಧಿಕಾರಿ.
ನಂತರ – 3ನೇ – ವಾಕ್ಯದಲ್ಲಿ ನಾವು ಹೀಗೆ ಓದುತ್ತೇವೆ –

**ಅದರ ತಲೆಗಳಲ್ಲಿ ಒಂದು ತಲೆ ಗಾಯಹೊಂದಿ ಸಾಯುವಹಾಗಿರುವದನ್ನು ಕಂಡೆನು"**

ಇದು ಪೋಪ್ ವ್ಯವಸ್ಥೆಗೆ ಚಳುವಳಿಯಿಂದಾದ "ಒಡೆತ"ದ ಪರಿಣಾಮವನ್ನು ಸೂಚಿಸುವ ಸಾಂಕೇತಿಕ ಚಿತ್ರಣವಾಗಿದೆ ಎಂದು ಇದೇ ಅಧ್ಯಾಯನದ 14ನೇ ವಾಕ್ಯದಲ್ಲಿ ಓದುತ್ತೇವೆ –

**"ಕತ್ತಿಯಿಂದ ಗಾಯಹೊಂದಿ ಸಾಯದೆ ಬದುಕಿದ ಮೃಗದ ಘನಕ್ಕಾಗಿ ವಿಗ್ರಹವನ್ನು ಮಾಡಿಸಿಕೊಳ್ಳಬೇಕೆಂದು ಬೋಧಿಸುತ್ತದೆ."**

ಹೌದು! ಈ "ಗಾಯ"ವು "ಕತ್ತಿ"ಯಿಂದ ಉಂಟಾಗಿ ಆ "ಕತ್ತಿ"ಯು ದೇವರ ವಾಕ್ಯವಾಗಿದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಇಬ್ರಿಯರಿಗೆ 4:12**

**"ಯಾಕಂದರೆ ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು, ಪ್ರಾಣ ಆತ್ಮಗಳನ್ನೂ ಕೀಲು ಮಜ್ಜೆಗಳನ್ನೂ ವಿಭಾಗಿಸುವಷ್ಟರ ಮಟ್ಟಿಗೂ ತೂರಿಹೋಗುವಂಥದು."**

ಹೌದು! ಇದು ಮಾರ್ಟಿನ್ ಲೂಥರ್ ರವರು ಸತ್ಯವೇದ ವಾಕ್ಯವನ್ನು (ಆಧಾರವಾಗಿ) ಉಪಯೋಗಿಸಿ ಪೋಪ್ ವ್ಯವಸ್ಥೆಯನ್ನು (Papacy) "ಕ್ರಿಸ್ತವಿರೋಧಿ" ಎಂದು ನಿರೂಪಿಸುವದನ್ನು ಸೂಚಿಸುತ್ತದೆ.

ಆದರೆ ಕೊನೆಯದಾಗಿ ನಾವು ಏನು ಓದುತ್ತೇವೆಂದರೆ –

**"ಆ ಮರಣಕರವಾದ ಗಾಯವು ವಾಸಿಯಾಯಿತು"**

ಇದು ಕ್ರಿ.ಶ 1517 ನಂತರ ಚಳುವಳಿಯ ಹೊಡೆತದಿಂದ ಪೋಪ್ ವ್ಯವಸ್ಥೆಯನ್ನು ಮರಳಿ ಪಡೆದದ್ದನ್ನು ಸೂಚಿಸುತ್ತದೆ, ಇದಾದ ನಂತರ ಚಳುವಳಿ ಮಾಡುವವರು ಸತ್ತು ಅವರ ಹಿಂಭಾಲಕರು ಸ್ವತಃ ಇದೇ "ಆತ್ಮದಲ್ಲಿ" ಬಿದ್ದುಹೋದರು –

ಸಭೆಯು ಆ ರಾಜ್ಯದ ಸಾಲಿನಲ್ಲಿ ಸೇರಿಕೊಂಡಿತು

ಮತ್ತು ಕ್ರಮೇಣವಾಗಿ ಅಂದರೆ 2–3 ಶತಕಗಳವರೆಗೆ ಚಳುವಳಿಯ "ಹೋರಾಟವನ್ನು" ಮರೆತುಬಿಟ್ಟಿತು ಮತ್ತು ಆ ಚಳುವಳಿಗಾರರು ಪೋಪ್ ವ್ಯವಸ್ಥೆಯ ಬಗ್ಗೆ ಪ್ರಕಟಿಸಿದ್ದ ಸತ್ಯಗಳನ್ನು ಮರೆತುಬಿಟ್ಟರು.

ಉದಾಹರಣೆ: ಜರ್ಮನಿಯಲ್ಲಿರುವ ಲೂತೆರನ್ ಸಭೆಯು ಜರ್ಮನಿಯ ರಾಜರುಗಳಿಂದ ಮಹಾದಯೆಯನ್ನು ಹೊಂದಿಕೊಂಡರು.

ಆದ್ದರಿಂದ ಈ ಪೋಪ್ ವ್ಯವಸ್ಥೆಯ ಪ್ರವಾದನೆಯು ಒಂದು "ಮೃಗ" ಅಥವಾ ಸಭೆ–ರಾಜ್ಯಸರ್ಕಾರ ಮತ್ತು ಸಾಮ್ರಾಜ್ಯವೆಂದು ನೋಡಿದ್ದೇವೆ.

**ಈ ಸಂಯೋಜನೆಯನ್ನು (ಜೋಡಿಯನ್ನು) ಕುರಿತು ಬಹಳ ಸ್ಪಷ್ಟವಾಗಿ ಪ್ರಕಟನೆ 17ನೇ ಅಧಿಕಾರದಲ್ಲಿ ನೋಡುತ್ತೇವೆ. ಇಲ್ಲಿ ಇನ್ನೊಂದು "ಸ್ತ್ರೀ"ಯನ್ನು ಕುರಿತು ವಿವರವಾಗಿ ಕೊಟ್ಟಿರುವದನ್ನು ಸಹ ನೋಡುತ್ತೇವೆ.**

ಆಕೆ ಯಾರು? ಆಕೆಯನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ –

ಪ್ರಕಟನೆ 17: 3-6

"ಆಗ ಅವನು ಆತ್ಮದಲ್ಲಿ ನನ್ನನ್ನು ಎತ್ತಿಕೊಂಡು ಅಡವಿಗೆ ಹೋದನು; ಅಲ್ಲಿ ದೇವದೂಷಣೆಯ ಹೆಸರುಗಳಿಂದ ತುಂಬಿದ್ದ ಏಳು ತಲೆಗಳು ಹತ್ತು ಕೊಂಬುಗಳೂ ಇದ್ದ ಕೆಂಪುಬಣ್ಣದ ಮೃಗದ ಮೇಲೆ ಕೂತಿದ್ದ ಒಬ್ಬ ಸ್ತ್ರೀಯನ್ನು ನಾನು ಕಂಡೆನು.



ಆ ಸ್ತ್ರೀಯು ಧೂಮ್ರ ಮತ್ತು ಕೆಂಪುವರ್ಣದ ವಸ್ತ್ರಗಳನ್ನು ಧರಿಸಿಕೊಂಡು ಚಿನ್ನ ಅಮೂಲ್ಯವಾದ ಕಲ್ಲುಗಳು ಮತ್ತು ಮುತ್ತುಗಳು ಇವುಗಳಿಂದ ಅಲಂಕರಿಸಿಕೊಂಡಿದ್ದಳು;.....

......ಅವಳ ಕೈಯಲ್ಲಿ ಒಂದು ಚಿನ್ನದ ಬಟ್ಟಲು ಇತ್ತು; ಅದು ಅವಳ ಜಾರತ್ವದ ಅಸಹ್ಯವಾದವುಗಳಿಂದಲೂ ಅಶುದ್ಧತ್ವದಿಂದಲೂ ತುಂಬಿತು....."

ವಾಕ್ಯ – 5 – ಬಾಬೆಲೆಂಬ ಮಹಾನಗರಿ – ಭೂಮಿಯಲ್ಲಿರುವ ಜಾರಸ್ತ್ರೀಯರಿಗೂ ಅಸಹ್ಯವಾದ ಕಾರ್ಯಗಳಿಗೂ ತಾಯಿ ಎಂದು ಗೂಡಾರ್ಥವುಳ್ಳ ಹೆಸರು ಬರೆದಿತ್ತು.

ವಾಕ್ಯ – 6 – **"ಆ ಸ್ತ್ರೀಯು ದೇವಜನರ ರಕ್ತವನ್ನು ಯೇಸುವಿಗೋಸ್ಕರ ಸಾಕ್ಷಿ ಕೊಟ್ಟು ಹತರಾದವರ ರಕ್ತವನ್ನೂ ಕುಡಿದು ಮತ್ತಳಾಗಿರುವದನ್ನು ಕಂಡೆನು."**

ಈ ಸ್ತ್ರೀಯಾರು ಎಂದು ತಿಳಿದುಕೊಳ್ಳಲು ಬೇಕಾದ ಬೀಗದಕ್ಕೆ 6ನೇ ವಾಕ್ಯದಲ್ಲಿದೆ! ಹೌದು! "ಆಕೆಯು" ದೇವಜನರನ್ನು ಚಿತ್ರಹಿಂಸೆ ಕೊಡುವ – ಬಾಬೆಲೆಂಬ ಮಹಾನಗರಿ!!

**'ದೇವಜನರನ್ನು' ಚಿತ್ರಹಿಂಸೆಕೊಡುವ ಆ ಸ್ತ್ರೀ ಯಾರು?**

**ಮೊದಲು ನಾವು ಆಕೆಯು ಕುಳಿತಿರುವ 'ಮೃಗ'ವನ್ನು ಕುರಿತು ನೋಡೋಣ?**

**"ಆ ಮೃಗದ ಮೈಮೇಲೆಲ್ಲಾ ದೇವದೂಷಣೆಯ ಹೆಸರುಗಳು ತುಂಬಿದ್ದವು. ಅದಕ್ಕೆ ಏಳು ತಲೆಗಳೂ ಹತ್ತು ಕೊಂಬುಗಳೂ ಇದ್ದವು."**



ಹೌದು! ಇಲ್ಲಿ ತೋರಿಸಿರುವ "ಮೃಗವು" "ರಕ್ತವರ್ಣ"ದಲ್ಲಿ ಸಾಂಕೇತಿಕವಾಗಿ ತೋರಿಸಲಾಗಿದೆ!!

**'ರಕ್ತವರ್ಣ' ಏನ್ನನ್ನು ಸೂಚಿಸುತ್ತದೆ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೆಶಾಯ 1:18**

**"ನಿಮ್ಮ ಪಾಪಗಳು ಕಡು ಕೆಂಪಾಗಿದ್ದರೂ ಹಿಮದ ಹಾಗೆ ಬಿಳುಪಾಗುವವು."**

ಹೌದು! "ರಕ್ತವರ್ಣ"ವು ಪಾಪವನ್ನು ಸೂಚಿಸುತ್ತದೆ!

ಆದ್ದರಿಂದ "ಮೃಗವು" ಸಾಮ್ರಾಜ್ಯವನ್ನೂ ಮತ್ತು "ರಕ್ತವರ್ಣ"ವು ಪಾಪವನ್ನೂ ಅರ್ಥೈಸುತ್ತದೆ (ಅರ್ಥನೀಡುತ್ತದೆ), ಆದ್ದರಿಂದ

ಇದು ಪಾಪದ ಸಾಮ್ರಾಜ್ಯವನ್ನು ಸೂಚಿಸುತ್ತದೆ!

ಹೌದು! ಇದು "ಅಧರ್ಮ ಸ್ವರೂಪನು" (ಪಾಪದ ಮನುಷ್ಯನು) – ಪೋಪ್ ನ ಕ್ರಿಸ್ತವಿರೋಧಿಯವ್ಯವಸ್ಥೆ (2 ಥೆಸಲೋನಿಕ 2: 3,4)

"ಮೈ ಮೇಲೆಲ್ಲಾ ದೇವದೂಷಣೆಯ ಹೆಸರುಗಳು ತುಂಬಿದ್ದವು" ಎಂದರೆ ಏನನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ದಾನಿಯೇಲನು 7:25**

**"......ಪರಾತ್ಪರನಿಗೆ ವಿರೋಧವಾಗಿ ಕೊಚ್ಚಿಕೊಂಡು....."**

ಹೌದು! ಪೋಪನು ದೇವದೂಷಣೆಯ ಪದವಿಯನ್ನು ಉಪಯೋಗಿಸಿರುವದನ್ನು ಸೂಚಿಸುತ್ತದೆ!

ಮತ್ತು "ಏಳು ತಲೆಗಳೂ ಹತ್ತು ಕೊಂಬುಗಳೂ" ಇನ್ನೂ ದೃಢಪಡಿಸುವದೇನೆಂದರೆ ಈ "ಮೃಗ"ವು ರೋಮನ್ ಸಾಮ್ರಾಜ್ಯದಿಂದ ತನ್ನ ಅಧಿಕಾರವನ್ನು ಆರಂಭಿಸಿದ ಪೋಪ್ ವ್ಯವಸ್ಥೆಯನ್ನು ಸೂಚಿಸುತ್ತದೆ.

## ಈಗ ಈ "ಸ್ತ್ರೀ" ಯಾರು?

ಸತ್ಯವೇದದಲ್ಲಿ "ಸ್ತ್ರೀ"ಯು ಸಭೆಗೆ ಸೂಚಿಸಲಾಗಿದೆ. ಆದರೆ ಸತ್ಯವೇದದಲ್ಲಿ ಎರಡು "ಸ್ತ್ರೀ"ಗಳಿದ್ದಾರೆ –

ನಿಜವಾದ ಸಭೆಗೆ "ಶುದ್ಧ ಕನ್ಯೆ" ಎಂದು 2 ಕೊರಿಂಥ 11:2ರಲ್ಲಿ ತೋರಿಸಲಾಗಿದೆ.

.....ಮತ್ತು ಪ್ರಕಟನೆ 17:1 ರಲ್ಲಿರುವ ಈ "ಸ್ತ್ರೀ" ಸಹ ಸಭೆಯಾಗಿದೆ!

ಆದರೆ ನಾವು ಈ ಸಭೆಯು "ರಕ್ತವರ್ಣದ ಮೃಗದ" ಮೇಲೆ ಅಥವಾ ಪೋಪ್ ವ್ಯವಸ್ಥೆಯ ಮೇಲೆ ಕುಳಿತಿದ್ದಾಳೆ.

ಹೌದು! ಈ ಸಭೆಯ ಪೋಪ್ ವ್ಯವಸ್ಥೆಯಿಂದ ಆರಂಭವಾದದ್ದು –

## "ರೋಮನ್ ಕ್ಯಾಥೋಲಿಕ್ ಸಭೆ "

ಇದರ ಹೆಸರಿನಲ್ಲಿ "ರೋಮನ್" ಎಂಬುದನ್ನು ಗಮನಿಸಿರಿ!
ಇದು ಅದರ ಆರಂಭವನ್ನು ತೋರಿಸುತ್ತದೆ!

**ಇದು ಯೇಸು ಕ್ರಿಸ್ತನ ಸಭೆ ಅಲ್ಲ!**
**ಈ ಸಭೆಯು ಪೋಪ್ ವ್ಯವಸ್ಥೆಯಾಗಿದ್ದು ಇದರ ತಲೆ ಕರ್ತನಾದ ಯೇಸು ಅಲ್ಲ ಆದರೆ ಪೋಪ್ ಇದರ ತಲೆಯಾಗಿದ್ದಾನೆ!!**

ಈಗ ಈ "ಸ್ತ್ರೀ" ಅಥವಾ ರೋಮನ್ ಕ್ಯಾಥೋಲಿಕ್ ಸಭೆಯ ಬಗ್ಗೆ ಏನು ಓದುತ್ತೇವೆ ?

– 4ನೇ ವಾಕ್ಯವನ್ನು ಓದೋಣ –

**"ಆ ಸ್ತ್ರೀಯು ಧೂಮ್ರವರ್ಣದ ವಸ್ತ್ರಗಳನ್ನು ರಕ್ತಾಂಬರವನ್ನು ಧರಿಸಿಕೊಂಡು ಚಿನ್ನ ರತ್ನ ಮುತ್ತು ಇವುಗಳಿಂದ ಅಲಂಕರಿಸಿಕೊಂಡಿದ್ದಳು; ಅವಳ ಕೈಯಲ್ಲಿ ಒಂದು ಚಿನ್ನದ ಬಟ್ಟಲು ಇತ್ತು; ಅದು ಅಸಹ್ಯವಾದವುಗಳಿಂದ ಅಂದರೆ ಅವಳ ಜಾರತ್ವ ಸಂಬಂಧವಾದ ಅಶುದ್ಧವಸ್ತುಗಳಿಂದ ತುಂಬಿತ್ತು."**



ಇಲ್ಲಿ "ಧೂಮ್ರ ಮತ್ತು ರಕ್ತಾಂಬರ" ವರ್ಣಗಳು ಈ "ಸಭೆ"ಯು ರಾಜವೈಭವದೊಂದಿಗೆ "ಅಧರ್ಮ ಸ್ವರೂಪ" ವ್ಯವಸ್ಥೆಯ ಮಹಿಮೆಯ ಭಾಗದ ಆಳ್ವಿಕೆಯನ್ನು ಸೂಚಿಸುತ್ತದೆ.



ಇನ್ನೊಂದು ರೀತಿಯಲ್ಲಿ ಮತ್ತು ನೇರವಾದ ರೀತಿಯಲ್ಲಿ ನೋಡುವದಾದರೆ

ಈ ಎರಡೂ ವರ್ಣಗಳನ್ನು ಬಹಳ ಸಾಮಾನ್ಯವಾಗಿ ಮತ್ತು ಪ್ರಖ್ಯಾತವಾಗಿ ಪಾದ್ರಿಗಳು, ಕಾರ್ಡಿನಲ್ಸ್ ಗಳು ಮತ್ತು ಪ್ರಧಾನ ಸಭಾಧ್ಯಕ್ಷಕರು ಮತ್ತು ಇತರರು ಧರಿಸಿಕೊಳ್ಳುವುದನ್ನು ನೋಡುತ್ತೇವೆ.

**"ಅವಳಕೈಯಲ್ಲಿ ಚಿನ್ನದ ಬಟ್ಟಲು"** ಎಂಬದು

ಬೋಧನೆಯ ದೈವೀಕ "ಪಾತ್ರೆ"ಯನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೆಶಾಯ 52:11**

**"ಯೆಹೋವನ ಆರಾಧನೆಯ ಉಪಕರಣಗಳನ್ನು ಹೊರುವವರೆ, ಶುದ್ಧರಾಗಿರಿ!"**

ಇಲ್ಲಿ "ಪಾತ್ರೆ" ಅಥವಾ "ಉಪಕರಣಗಳು" ಎಂದರೆ ನಮ್ಮ ಕರ್ತನ ಬೊಧನೆಗಳು ಮತ್ತು ವಾಕ್ಯಗಳನ್ನು ಸೂಚಿಸುತ್ತದೆ!!

ಹೌದು! ಆ "ಚಿನ್ನದ ಬಟ್ಟಲು" ಸತ್ಯವೇದವಾಗಿದೆ!!

ಆದರೆ "ಅದು ಅಸಹ್ಯವಾದವುಗಳಿಂದ ಅಂದರೆ ಅವಳ ಜಾರತ್ವ ಸಂಬಂಧವಾದ ಅಶುದ್ಧ ವಸ್ತುಗಳಿಂದ ತುಂಬಿತ್ತು", ಅಂದರೆ ಅದು ಹೇಗೆ ಸತ್ಯವೇದವು ಆಕೆಯ ಎಲ್ಲಾ ಕ್ರಿಯೆ ಮತ್ತು ಸುಳ್ಳು ಬೋಧನೆಗಳಿಗೆ ಮೂಲವಾಗಿತ್ತು ಎಂದು ಸೂಚಿಸುತ್ತದೆ.

**ಹೌದು! ಇವೆಲ್ಲವೂ ಸತ್ಯವೇದದಲ್ಲಿದೆ ಎಂದು ಹಕ್ಕುಸಾಧಿಸುತ್ತಾರೆ!**

ಉದಾಹರಣೆ: ದೇವರ ಮತ್ತು ಕ್ರಿಸ್ತನ ರಾಜ್ಯವು ಭೂಮಿಯಲ್ಲಿ ಆಗಲೇ ಸ್ಥಾಪಿತವಾಯಿತೆಂದು ಸುಳ್ಳಾದ ಹಕ್ಕುಸಾಧಿಸುವುದನ್ನು ಪ್ರಕಟನೆ 12:10ರಲ್ಲಿ ಖಚಿತವಾಗಿದೆ –

**"ಈಗ ಜಯವೂ ಶಕ್ತಿಯೂ ರಾಜ್ಯವೂ ನಮ್ಮ ದೇವರಿಗೆ ಉಂಟಾಯಿತು; ಆತನು ಅಭಿಷೇಕಿಸಿದವನ ಅಧಿಕಾರವು ಈಗ ಸ್ಥಾಪಿತವಾಯಿತು."**

ನಂತರ ನಾವು ವಾಕ್ಯ – 5 – ರಲ್ಲಿ ಹೀಗೆ ಓದುತ್ತೇವೆ –

**"ಬಾಬೆಲೆಂಬ ಮಹಾನಗರಿ, ಭೂಮಿಯಲ್ಲಿರುವ ಜಾರ ಸ್ತ್ರೀಯರಿಗೂ ಅಸಹ್ಯವಾದ ಕಾರ್ಯಗಳಿಗೂ ತಾಯಿ ಎಂದು ಗೂಢಾರ್ಥವುಳ್ಳ ಹೆಸರು ಬರೆದಿತ್ತು."**

ಹೌದು! ನಿಜವಾಗಿಯೂ ಈ ರೋಮನ್ ಕ್ಯಾಥೋಲಿಕ್ ಸಭೆಯು ಕ್ರಿಸ್ತವಿರೋಧಿ ಪೋಪ್ ವ್ಯವಸ್ಥೆಗೆ ಗುರುತಾಗಿದೆ ಮತ್ತು ನಿಜವಾದ ಯೇಸುಕ್ರಿಸ್ತನ ಸಭೆ ಅಲ್ಲ –

➡ "ಗುಪ್ತವಾಗಿರುವ ಅಧರ್ಮಸ್ವರೂಪನು" **(the mystery of iniquity)**

ಹೇಗೆ "ಬ್ಯಾಬಿಲೋನ್"ನಲ್ಲಿರುವ ಬಾಬೆಲ್ ಗೋಪುರ "ಪರಲೋಕದ ಬಾಗಿಲು" ಎಂದು ಹಕ್ಕು ಸಾಧಿಸಿ ನಂತರ ಅದು ಭಾಷೆಗಳಲ್ಲಿ ಗಲಭೆ ಉಂಟಾಗಿರುವದಕ್ಕೆ ಸಾಂಕೇತಿಕವಾಗಿದೆಯೋ ಹಾಗೆಯೇ,

ಸತ್ಯವೇದದಲ್ಲಿ ಇಲ್ಲದೇ ಇರುವ ಬೋಧನೆಗಳು ಮತ್ತು ಉಪದೇಶಗಳಿಗೆ ರೋಮನ್ ಕ್ಯಾಥೋಲಿಕ್ ಸಭೆಯ ಬೋಧನೆಗಳು

ಮತ್ತು ಉಪದೇಶಗಳು ಮಹಾ ಗೊಂದಲವನ್ನು ಉಂಟುಮಾಡಿದೆ!!

ಉದಾಹರಣೆ: ಆತ್ಮ, ನರಕ, ಉತ್ತರಕ್ರಿಯೆಯ ಸ್ಥಳ, ಮರಿಯಳನ್ನು ಆರಾಧಿಸುವದು ಇತರೆ.

**ಕೊನೆಯದಾಗಿ ಆಕೆಯು "ಜಾರಸ್ತ್ರೀಯರಿಗೂ ತಾಯಿ" ಎಂದು ಓದುತ್ತೇವೆ**

ಹೌದು! ರೋಮನ್ ಕ್ಯಾಥೋಲಿಕ್ ಸಭೆಯು "ತಾಯಿ ಸಭೆ" ಎಂದು ಹೆಸರಾಂತವಾಗಿದೆ.

ಭಾರತದ ದೇಶದ ತಮಿಳು ಭಾಷೆಯಲ್ಲಿ ಇದನ್ನು "ತಾಯಿ ಸಭೆ" ಎಂದು ಕರೆಯಲಾಗುತ್ತದೆ.

## ಈಗ, "ಜಾರಸ್ತ್ರೀ" ಎಂದರೇನು ಅರ್ಥ?

"ಜಾರತ್ವ" ಎಂಬ ಪದವು "ಕ್ರಿಸ್ತನ ಸಭೆ" ಎಂದು ಹೇಳಿಕೊಳ್ಳುವ ಆತ್ಮೀಕ ನಂಬಿಗಸ್ತರಲ್ಲದವರನ್ನು ಸೂಚಿಸುತ್ತದೆ.

➡ ಇವರು "**ಮದಲಿಂಗನ**" (ಮತ್ತಾಯ 25:6)

➡ ಮತ್ತು "**ಯಜ್ಞದ ಕುರಿಯಾದಾತನ ಮದುವೆ**"**ಗೆ** (ಪ್ರಕಟನೆ 19:7)

ಕಾಯದೆ ರಾಜ್ಯ ಮತ್ತು ಲೋಕದೊಂದಿಗೆ ನೆಂಟಸ್ತಿಕೆ ಇಟ್ಟುಕೊಂಡು ತಮ್ಮನ್ನೇ ಅಶುದ್ಧಪಡಿಸಿಕೊಂಡವರು. ಇದನ್ನು ಸತ್ಯವೇದದಲ್ಲಿ "ಇಹಲೋಕಸ್ನೇಹವು"

ಎಂದು ಯಾಕೋಬನು 4:4ರಲ್ಲಿ ಸೂಚಿಸಲಾಗಿದೆ.

ಆದ್ದರಿಂದ ರೋಮನ್ ಕ್ಯಾಥೋಲಿಕ ಸಭೆಯು ಸತ್ಯವೇದದ ಈ ದೃಷ್ಟಿಯಲ್ಲಿ "ಜಾರತ್ವದ ತಾಯಿ"ಯಾಗಿದ್ದಾಳೆ (ಎನ್.ಐ.ವಿ)

ಹೌದು! ಆಕೆ ಮಾತ್ರ ಆತ್ಮೀಕ ಜಾರಸ್ತ್ರೀ ಅಲ್ಲ ಆದರೆ ಆಕೆಗೆ ಆತ್ಮೀಕ ಜಾರಸ್ತ್ರೀಯ "ಮಗಳು" ಸಹ ಇದ್ದಾಳೆ!!

**ಅವರು('ಮಗಳು') ಯಾರು?**

**ಅವರು ಇವರಂತೆ ಬೇರೆ ಸಭೆಗಳಾಗಿದ್ದು ಲೋಕದೊಂದಿಗೆ ನೆಂಟಸ್ತಿಕೆ ಇಟ್ಟುಕೊಂಡಿರುತ್ತಾರೆ!**

ಅವರು("ಮಗಳು") ಯಾರು? ಕೆಳಗಿನ ವಾಕ್ಯದಲ್ಲಿ ಓದೋಣ –

**ಪ್ರಕಟನೆ 13:11**

**"ಮತ್ತೊಂದು ಮೃಗವು ಭೂಮಿಯೊಳಗಿಂದ ಬರುವದನ್ನು ನಾನು ಕಂಡೆನು. ಇದಕ್ಕೆ ಕುರಿಮರಿಗಿರುವಂತೆ ಎರಡು ಕೊಂಬುಗಳಿದ್ದವು; ಇದು ಘಟಸರ್ಪದಂತೆ ಮಾತನಾಡಿತು."**



**ಇದು ಇಂಗ್ಲ್ಯಾಂಡ ಮತ್ತು ಐರ್ಲ್ಯಾಂಡ್ ಸಭೆಯ ಚಿತ್ರಣವಾಗಿದೆ!**

ಇವರು ಹೆನ್ರಿ–8 ರ ಆಳ್ವಿಕೆಯಾದ ಕ್ರಿ.ಶ.1513ರಲ್ಲಿ ಪೋಪ್ ವ್ಯವಸ್ಥೆ ಆಧಾರ (ಸಹಾಯದಿಂದ) ಹೊರಬಂದು

– **ಎಪಿಸ್ಕೋಪಲ್ ಚರ್ಚ್**

ಎಂಬ ಇನ್ನೊಂದು ಸಭೆ – ರಾಜ್ಯ ಸರ್ಕಾರವನ್ನು ಅಥವಾ ಸಾಮ್ರಾಜ್ಯವನ್ನು ಸ್ಥಾಪಿಸಿದರು.



ಅಥವಾ ಇದು ಇನ್ನೊಂದು "ಮೃಗ"ವನ್ನು ಸೂಚಿಸುತ್ತದೆ.

ಈಗ ಈ ಸಂಕೇತಗಳ ಅರ್ಥವನ್ನು ನೋಡೋಣ –

**"ಎರಡು ಕೊಂಬುಗಳು"**

ಇದು ಕ್ರಿ.ಶ.1537ರಲ್ಲಿ ಸ್ಥಾಪಿತವಾದ ಈ ಸಭೆಯ ಎರಡು ಭಾಗಗಳ ನೆಂಟಸ್ತಿಕೆಯನ್ನು ಹೊಂದಿರುವ ಇಂಗ್ಲಾಂಡ್ ಮತ್ತು ಐರ್ಲ್ಯಾಂಡನ್ನು ಸೂಚಿಸುತ್ತದೆ.

**"ಟಗರಿಗಿರುವಂತೆ"**

ಇದು ಪೋಪ್ ವ್ಯವಸ್ಥೆಯ ಹಾಗೆ ಆಕ್ರಮಣ ಮನೋಭಾವವಿಲ್ಲದ ಮತ್ತು ಹಿಂಸಾತ್ಮಕವಲ್ಲದ
ಸಾಮ್ರಾಜ್ಯ ಅಥವಾ "ಮೃಗ"ವನ್ನು ಸೂಚಿಸುತ್ತದೆ.

**"ಘಟಸರ್ಪದಂತೆ ಮಾತಾಡಿತು"**

ನಾವು ಮೊದಲೇ ಪ್ರಕಟನೆ 12ನೇ ಅಧ್ಯಾಯದಲ್ಲಿ ನೋಡಿದ್ದೇನೆಂದರೆ "ಘಟಸರ್ಪ"ವೆಂಬ ಸಂಕೇತವು ನಾಗರಿಕ ಅಥವಾ ಸಾಮಾಜಿಕ ಅಧಿಕಾರವನ್ನು ಸೂಚಿಸುತ್ತದೆ.


ಇದು ಸೂಚಿಸುವ ನಿಜಾಂಶವೇನೆಂದರೆ ರಾಜ್ಯದ ಮುಖ್ಯಸ್ತ ಅಥವಾ ಇಂಗ್ಲಾಂಡ್ನ ರಾಜಪ್ರಭುತ್ವವು ಯಾರೆಂದರೆ –

**.....ವಕ್ತಾರ (ಪ್ರತಿನಿಧಿ) ಮತ್ತು ಈ ಸಭೆ–ರಾಜ್ಯ ನೆಂಟಸ್ತಿಕೆಯ ಮುಖ್ಯಸ್ತ.**

ಆದ್ದರಿಂದ ಕ್ರಿಸ್ಮಸ್ ದಿನದಂದು ಇಂಗ್ಲಾಂಡ್ನ ರಾಣಿ ಎಪಿಸ್ಕೋಪಲ್ ಸಭೆಯ ಪರವಾಗಿ ಇಂಗ್ಲಾಂಡ್ ಮತ್ತು ಐರ್ಲ್ಯಾಂಡ್ನ ಜನರಿಗೆ ಸುಭಕೋರುವ ಸಮಾಚಾರವನ್ನು ಹೇಳುವುದು ಸಾಮಾನ್ಯವಾಗಿದೆ!!



ಕ್ರಿ.ಶ.1517 ನಂತರ ಕ್ರಾಂತಿಕಾರಿ ಹೋರಾಟ ಉಂಟಾಯಿತು ಅಥವಾ ಕ್ರಾಂತಿಕಾರಿಗಳಾದ ಮಾರ್ಟಿನ್ ಲೂಥರ್, ಜಾನ್ ವೆಸ್ಲೆ, ನಾಕ್ಸ್, ಜಾನ್ ಕ್ಯಾಲ್ವಿನ್, ರಿಡ್ಲೇ, ಜ್ವಿಂಗ್ಲಿ ಇತರರು, ಪ್ರೊಟೆಸ್ಟೆಂಟ್ ಸಭೆಗಳ ಮೂಲಕ ಕ್ರಾಂತಿಯುಂಟಾಯಿತು.



**ನಿಶ್ಚಯವಾದ ಸತ್ಯವೇದದ ಸತ್ಯಗಳನ್ನು ಕಂಡುಹಿಡಿಯಲಾಯಿತು ಮತ್ತು ರೋಮನ್ ಸಭೆಯನ್ನು ದೋಷಾರೋಪಣೆ ಮಾಡಲಾಯಿತು ಮತ್ತು ಅದನ್ನು .... ಕ್ರಿಸ್ತವಿರೋಧಿ ಎಂದೂ ಸಹ ಗುರುತಿಸಲಾಯಿತು!**

ಆದರೆ ಕಾಲಕ್ರಮೇಣ ಮತ್ತು ಈ ಕ್ರಾಂತಿಕಾರಕವಾದ 2–3 ದಶಕಗಳ ನಂತರ ಕ್ರಾಂತಿಕಾರಿಗಳ ಹಿಂಬಾಲಕರು ನಿಧಾನವಾಗಿ ಪ್ರಕಟಪಡಿಸಿದ ಆ ಸತ್ಯಗಳನ್ನು ಮರೆತುಬಿಟ್ಟರು ಮತ್ತು "ತಾಯಿ" ಸಭೆಯ ಆತ್ಮದಲ್ಲಿ ಬೆಳವಣಿಗೆ ಹೊಂದಿದರು.

**...........ಈ ಭೂಮಿಯ ಅಧಿಕಾರಗಳನ್ನು ಹುಡುಕುತ್ತಾ ಆ ರಾಜ್ಯದವರಲ್ಲಿ ಬೆರೆತುಹೋದರು!**

**ಹೌದು! ಅವರು ಸತ್ಯದ ಪರವಾಗಿ ಹೋರಾಟಮಾಡುವದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟರು!**

ಆದ್ದರಿಂದ ಈ ಪ್ರತ್ಯೇಕವಾದ ಪ್ರವಾದನೆಯನ್ನು ಕುರಿತು ಓದುತ್ತೇವೆ –

**ಯೆಶಾಯ 4:1**

“ಆ ದಿನದಲ್ಲಿ ಏಳು ಮಂದಿ ಹೆಂಗಸರು ಒಬ್ಬ ಗಂಡಸನ್ನು ಹಿಡಿದು ಸ್ವಂತವಾಗಿ ದುಡಿದ ಅನ್ನವನ್ನು ಉಣ್ಣುವೆವು, ನಾವೇ ಸಂಪಾದಿಸಿದ ಬಟ್ಟೆಯನ್ನು ಉಟ್ಟುಕೊಳ್ಳುವೆವು; ನಿನ್ನ ಹೆಸರು ಮಾತ್ರ ನಮಗಿದ್ದರೆ ಸಾಕು.....”

**ಈ ವಾಕ್ಯದ ಅರ್ಥವೇನು?**

**ಇದನ್ನು ನೇರವಾದ ಭಾಷೆಯಲ್ಲಿ ತೆಗೆದುಕೊಳ್ಳಬೇಕೆ?**

ಹಾಗಿದ್ದರೆ, ಒಂದು ಕಾಲದಲ್ಲಿ ಒಬ್ಬ ಮನುಷ್ಯನಿಗೆ ಏಳು ಹೆಂಡತಿಯರಿರುತ್ತಾರೆ!!

ಇದು ಮುಸ್ಲಿಮ್ ಕುರಾನ್ ನಂಬಿಕೆಯ ಪ್ರಕಾರ ಒಂದು ಕಾಲ ಬರುತ್ತದೆ ಆ ಕಾಲದಲ್ಲಿ ಒಬ್ಬ ಗಂಡಸಿಗೆ ಒಂಬತ್ತು ಹೆಂಡತಿಯರಿರುತ್ತಾರೆ!!

ಆದರೆ ಇದು ನೇರವಾದ ಭಾಷೆಯಲ್ಲ ಎಂದು ನಮಗೆ ಗೊತ್ತಿದೆ!

**ಇದು ಸಾಂಕೇತಿಕ ಭಾಷೆಯಲ್ಲಿನ ಒಂದು ಪ್ರವಾದನೆಯಾಗಿದೆ!!**

ಇಲ್ಲಿ "ಹೆಂಗಸರು" ಎಂದರೆ ಸಭೆಗಳು ಎಂಬುದಕ್ಕೆ ಸೂಚನೆಯಾಗಿದೆ ಮತ್ತು ಈ ವಿಷಯದಲ್ಲಿ –

........"ಹೆಂಗಸರು" ಎಂಬುದು ಬಹುವಚನವಾಗಿದೆ ಮತ್ತು ನಿಜವಾದ ಸಭೆಗೆ ವಿರುದ್ಧವಾಗಿದೆ.

.........ನಿಜವಾದ ಸಭೆಯನ್ನು "ಹೆಂಗಸು" ಅಥವಾ "ಸ್ತ್ರೀ" ಎಂದು ಸೂಚಿಸಲಾಗಿದೆ ಮತ್ತು ಇದು ನಿಜವಾದ ಸಭೆಯ ಏಕತೆಯನ್ನು ಸೂಚಿಸುತ್ತದೆ!!

ಇಲ್ಲಿ "ಏಳು ಹೆಂಗಸರು" ಎಲ್ಲಾ ಮೊತ್ತ ಸುಳ್ಳು ಸಭೆಗಳ ಬೆಳವಣಿಗೆಯು ಈ ಸುವಾರ್ತಾ ಯುಗದಲ್ಲಿ
ಏಳುಕಾಲದ ಹಂತಗಳಲ್ಲಿ ಉಂಟಾಗಿದ್ದನ್ನು ಸೂಚಿಸುತ್ತದೆ.

(ಈ ಏಳು ಕಾಲಗಳ ವಿವರಣೆಯನ್ನು ಕುರಿತು ಅಭ್ಯಾಸ # 45ರಲ್ಲಿ ನೋಡಲಿದ್ದೇವೆ)

ಹೌದು! ಅವರೆಲ್ಲರೂ **"ಒಬ್ಬ ಗಂಡಸನ್ನು ಹಿಡಿದುಕೊಳ್ಳುವರು"**

ಈ "ಒಬ್ಬ ಗಂಡಸು" ಯೇಸು ಕ್ರಿಸ್ತನಾಗಿದ್ದಾನೆ ಮತ್ತು ಈ ಎಲ್ಲಾ "ಹೆಂಗಸರು" ಅಥವಾ ಸಭೆಗಳು "ನಿನ್ನ ಹೆಸರು....." ಎಂದು ಕರೆಯಲ್ಪಡುವದಕ್ಕೆ ಹುಡುಕುತ್ತಾರೆ.

ಹೌದು! ಅವರೆಲ್ಲರೂ ಕ್ರೈಸ್ತಸಭೆಗಳು ಎಂದು ಕರೆಯಲ್ಪಡುವದಕ್ಕೆ ಹುಡುಕುತ್ತಾರೆ! ಆದರೆ ಕೆಳಗಿನ ಸಾಂಕೇತಿಕ ವಾಕ್ಯದಲ್ಲಿ ಅವರು ಏನು ಮಾಡುತ್ತಾರೆ ಎಂದು ಗಮನಿಸೋಣ –

**"ಸ್ವಂತವಾಗಿ ದುಡಿದ ಅನ್ನವನ್ನು ಉಣ್ಣುವೆವು"**

ಹೌದು! ಅವರ "ಅನ್ನ" ಅಥವಾ ಬೋಧನೆಗಳು ಕ್ರಿಸ್ತನದಲ್ಲ ಅಥವಾ ಪವಿತ್ರ ವಾಕ್ಯವಲ್ಲ ಆದರೆ ಈ ಲೋಕದ್ದಾಗಿದೆ.

ಅವರು ದೇವರ ವಾಕ್ಯಕ್ಕೆ ಮತ್ತು ಸತ್ಯಕ್ಕೆ ವಿಧೇಯರಾಗಿರುವದಕ್ಕೆ ಹುಡುಕುವುದಿಲ್ಲ ಆದರೆ ಸಾಂಪ್ರದಾಯಕ ಬೋಧನೆಗಳನ್ನು ಹುಡುಕುತ್ತಾರೆ.

ತಪ್ಪಾಗಿ ಬೋಧನೆಗಳನ್ನು ಅನೇಕ ಶತಕಗಳಿಂದ ಬೋಧಿಸುತ್ತಿದ್ದಾರೆ

**"ಸ್ವಂತವಾಗಿ ದುಡಿದ ಅನ್ನ"**

**"ನಾವೇ ಸಂಪಾದಿಸಿದ ಬಟ್ಟೆಯನ್ನು ಉಟ್ಟು ಕೊಳ್ಳುವೆವು"**

ಅವರು ಕ್ರಿಸ್ತನ ನೀತಿಯೆಂಬ ವಸ್ತ್ರದ ಬಗ್ಗೆ ಸ್ವಲ್ಪವೂ ಚಿಂತಿಸುವುದಿಲ್ಲ (ಯೆಶಾಯ 61:10) ಆದರೆ ಅವರ ಸ್ವಂತ ನೀತಿಯೆಂಬ ವಸ್ತ್ರವನ್ನು ಧರಿಸಿಕೊಳ್ಳಲು ಇಷ್ಟಪಡುತ್ತಾರೆ ಎಂದು ಕೆಳಗಿನ ವಾಕ್ಯವು ವಿವರಿಸುತ್ತದೆ –

ಯೆಶಾಯ 64:6 – "ನಮ್ಮ ಧರ್ಮಕಾರ್ಯಗಳೆಲ್ಲಾ ಹೊಲೆಯ ಬಟ್ಟೆಯಂತಿವೆ….."

**ಈ 'ಧರ್ಮಕಾರ್ಯಗಳು' ಎಂದರೇನು?**

ಇದು ಧನಸಹಾಸ ಮತ್ತು ಸಮಾಜಸೇವೆಗಳಾದ ಶಾಲೆಗಳು, ಆಸ್ಪತ್ರೆಗಳು, ಅನಾಥಾಶ್ರಮಗಳು, ಕಾಲೇಜುಗಳನ್ನು ತೆರೆಯುವದು, ಇತರೆ.,

ಇವೆಲ್ಲವೂ "ಒಳ್ಳೆಯ ಕೆಲಸಗಳಾಗಿದ್ದರೂ ಖಂಡಿತವಾಗಿಯೂ ಅವುಗಳಿಗೆ ಪಾಪವನ್ನು ಮುಚ್ಚಲು ಅಥವಾ ತೊಳೆಯಲು ಶಕ್ತಿಯಿಲ್ಲ.

**ಅವು ಎಂದಿಗೂ ಪಾಪಿಯನ್ನು ನೀತಿವಂತನಾಗಿ ಮಾಡಲು ಸಾಧ್ಯವಿಲ್ಲ!**

ಒಬ್ಬ ಕ್ರೈಸ್ತನ ನೀತಿಯು "ಕ್ರಿಸ್ತನ ರಕ್ತ" ದಿಂದ ಮಾತ್ರವೇ ಉಂಟಾಗುತ್ತದೆ ಎಂದು ಮತ್ತು ಇನ್ನಿತರ ಕೆಲಸಗಳನ್ನು ಮಾಡುವ ಅವಶ್ಯವಿಲ್ಲ ಎಂದು ಈ ಸಭೆಗಳು ಮನದಟ್ಟು ಮಾಡಿಕೊಳ್ಳುವುದಿಲ್ಲ.

ಹೌದು! "ತಾವೇ ಸಂಪಾದಿಸಿದ ಬಟ್ಟೆಯನ್ನು" ಧರಿಸಿಕೊಳ್ಳಲು ಒತ್ತಾಯಿಸುತ್ತಾರೆ.

**ಆದ್ದರಿಂದ ಈ "ಹೆಂಗಸರು" ತಪ್ಪಾದ ಪ್ರಾಟೆಸ್ಟಂಟ್ ಸಭೆಗಳು ಮತ್ತು ರೋಮನ್ ಕ್ಯಾಥೋಲಿಕ್ ಸಭೆಯನ್ನು ಸೂಚಿಸುತ್ತದೆ!!**

ಈಗ ನಿಜವಾದ ಸಭೆಯ ಚಿತ್ರಣವನ್ನು ಕೆಳಗಿನ ವಾಕ್ಯದಲ್ಲಿ ಓದೋಣ –

**ಪ್ರಕಟನೆ 14:4**

"ಸ್ತ್ರೀ ಸಹವಾಸದಿಂದ ಮಲಿನರಾಗದವರು ಇವರೇ, ಇವರು ಕನ್ಯೆಯರಂತೆ ನಿಷ್ಕಳಂಕರು."

ಹೌದು! ಅಭ್ಯಾಸ # 18ರಲ್ಲಿ ನಾವು ಓದಿದ್ದನ್ನು ನೆನಪುಮಾಡಿಕೊಳ್ಳೋಣ ಮತ್ತು ಅದು ನೇರವಾದ ಭಾಷೆಯಲ್ಲ ಆದರೆ ಸಾಂಕೇತಿಕ ಭಾಷೆಯೆಂದು ನಮಗೆ ಮನದಟ್ಟಾಗಿದೆ.

ಇಂದು ಅದರ ನಿಜವಾದ ಅರ್ಥವನ್ನು ನೋಡೋಣ!

ಇಲ್ಲಿ "ಇವರು" ಎಂದರೆ ನಿಜವಾದ ಸಭೆಯ ಅಂಗಗಳಾದ (ಸದಸ್ಯರಾದ) 1,44,000ಅನ್ನು ಸೂಚಿಸುತ್ತದೆ!!

ಈಗ ಇಲ್ಲಿ ಉಪಯೋಗಿಸಿರುವ ಸಂಕೇತಗಳು ಏನ್ನನ್ನು ಸೂಚಿಸುತ್ತದೆ ಎಂದು ನೋಡೋಣ –

**"ಸ್ತ್ರೀ ಸಹವಾಸದಿಂದ ಮಲಿನರಾಗದವರು"**

ಇದು ಸತ್ಯವನ್ನು ಅರಿತುಕೊಂಡ ಮೇಲೆ ಈ ಸದಸ್ಯರು ಇನ್ನು ಮುಂದೆ ಈ **"ಹೆಂಗಸರು"** – ಅಂದರೆ ಸುಳ್ಳು ಸಭೆಗಳು ಮತ್ತು ಸುಳ್ಳು ಬೋಧನೆಗಳ ಜೊತೆಗೆ ಸೇರಲಿಲ್ಲವೆಂದು ಸೂಚಿಸುತ್ತದೆ!!

**"ಇವರು ಕನ್ಯೆಯರಂತೆ"**

ಇದು ಬೋಧನೆ ಮತ್ತು ಕ್ರಿಸ್ತನ ಆತ್ಮದ ಮೇಲ್ಲಿದ್ದ ಪವಿತ್ರತೆಯನ್ನು ಸೂಚಿಸುತ್ತದೆ.

..........ಸತ್ಯಕ್ಕಾಗಿರುವ ಪ್ರೀತಿ ಮತ್ತು ನಂಬಿಕೆ ಮತ್ತು ವಿಧೇಯತೆ!!

ನಾವು ನಿಜವಾದ ಸಭೆಯಲ್ಲಿರುವ ಇನ್ನೊಂದು ಚಿತ್ರಣವನ್ನು ನೋಡೋಣ –

**ಪ್ರಕಟನೆ 20:4**

**"ತರುವಾಯ ಸಿಂಹಾಸನಗಳನ್ನು ಕಂಡೆನು. ಅವುಗಳ ಮೇಲೆ ಕೂತಿದ್ದವರಿಗೆ ನ್ಯಾಯತೀರಿಸುವ ಅಧಿಕಾರವು ಕೊಡಲ್ಪಟ್ಟಿತು. ಇದಲ್ಲದೆ ಯೇಸುವಿನ ವಿಷಯವಾದ ಸಾಕ್ಷಿಯ ನಿಮಿತ್ತವಾಗಿಯೂ ದೇವರ ವಾಕ್ಯದ ನಿಮಿತ್ತವಾಗಿಯೂ ತಲೆಹೊಯಿಸಿಕೊಂಡವರ ಆತ್ಮಗಳನ್ನೂ ಮೃಗಕ್ಕೂ ಅದರ ವಿಗ್ರಹಕ್ಕೂ....."**

**ಇಲ್ಲಿ ಕೊಟ್ಟಿರುವ 'ಗುರುತು' ಎಂದರೆ ಏನ್ನನ್ನು ಸೂಚಿಸುತ್ತದೆ?**

**ಇದೊಂದು ಚಿಹ್ನೆಯ "ಗುರುತಾ"ಗಿದೆ!**

ಇದೆ ಹೇಗೆ ನಿಜವಾದ ಸಭೆಯ ಅಂಗದವರು –

**"ಮೃಗ"**

**ಮತ್ತು "ಮೃಗದ ವಿಗ್ರಹ" ವೆಂಬ**

ಈ ವ್ಯವಸ್ಥೆಗಳ ಗುರುತು ಇರುವುದಿಲ್ಲ ವೆಂಬದನ್ನು ಕುರಿತು ಮಾತನಾಡುತ್ತದೆ.

ಈಗ ನಮಗೆ ಗೊತ್ತಿರುವಹಾಗೆ "ಮೃಗ"ವೆಂದರೆ ಪೋಪ್ ವ್ಯವಸ್ಥೆ ಮತ್ತು ಅದರ ರೋಮನ್ ಕ್ಯಾಥೋಲಿಕ್ ಸಭೆಯನ್ನು ಸೂಚಿಸುತ್ತದೆ.

## "ಮೃಗದ ವಿಗ್ರಹ" ಎಂದರೇನು?

ನಾವು ಅದರ ಅರ್ಥವನ್ನು ತಿಳಿದುಕೊಳ್ಳೋಣ, ಆದರೆ ಅದಕ್ಕೆ ಮೊದಲು ಆ "ಗುರುತು" ಎಲ್ಲಿ ಹಾಕಿಕೊಂಡಿರುವರು ಮತ್ತು ಅದು ಏನ್ನನ್ನು ಸೂಚಿಸುತ್ತದೆ ಎಂದು ನೋಡೋಣ –

**"....ತಮ್ಮ ಹಣೆಯ ಮೇಲೆ...."**

ಇದು ಬುದ್ಧಿ ಶಕ್ತಿ ಮತ್ತು ಬೋಧನೆ ಮತ್ತು ಉಪದೇಶಗಳನ್ನು ಅಂಗೀಕರಿಸುವದು ಅಥವಾ ನಂಬುವುದನ್ನು ಸೂಚಿಸುತ್ತದೆ.

## "......ಕೈಯ ಮೇಲೆ...."

ಇದು ಕೊಡುವುದನ್ನು ಸೂಚಿಸುತ್ತದೆ ಮತ್ತು ಈ ವಿಷಯದಲ್ಲಿ ಹಣಕಾಸಿನ ಸಹಾಯ ಮತ್ತು ಈ ವ್ಯವಸ್ಥೆಗಳಿಗೆ ಕಾಣಿಕೆ ನೀಡುವುದನ್ನು ಸೂಚಿಸುತ್ತದೆ.

ಇದು ಈ ವ್ಯವಸ್ಥೆಯ ನಿರ್ವಹಣೆಗಾಗಿ ಬಹಳ ಮುಖ್ಯವಾಗಿದೆ.

**ಸತ್ಯವನ್ನು ಕಲಿತುಕೊಂಡ ನಿಜವಾದ ಸಭೆಯ ಅಂಗದವರು ತಕ್ಷಣ ತಮ್ಮ ನಂಬಿಕೆ ಮತ್ತು ಹಣಕಾಸಿನ ಸಹಾಯ ಮಾಡುವುದನ್ನು ನಿಲ್ಲಿಸಿದರು (ಹಿಂತೆದುಕೊಂಡರು).**

## ಈಗ – 'ಮೃಗದ ವಿಗ್ರಹ' ಎಂದರೇನು?

ಕೆಳಗಿನ ವಾಕ್ಯವನ್ನು ಓದೋಣ –

**ಪ್ರಕಟನೆ 13:15**

**"ಮೃಗದ ವಿಗ್ರಹವು ಮಾತನಾಡುವಂತೆಯೂ ಆ ಮೃಗದ ವಿಗ್ರಹವನ್ನು ಯಾರಾರು ಆರಾಧಿಸುವದಿಲ್ಲವೋ ಅವರನ್ನು ಕೊಲ್ಲಿಸು ವಂತೆಯೂ ಆ ಮೃಗದ ವಿಗ್ರಹಕ್ಕೆ ಜೀವ ಕೊಡುವ ಅಧಿಕಾರವು ಅದಕ್ಕೆ ಇತ್ತು."**

ನಮಗೆಲ್ಲರಿಗೂ ಗೊತ್ತಿರುವ ಹಾಗೆ "ಮೃಗ" ಎಂದರೆ ಪೋಪ್ ವ್ಯವಸ್ಥೆ ಮತ್ತು ರೋಮನ್ ಕ್ಯಾಥೋಲಿಕ್ ಸಭೆಯನ್ನು ಸೂಚಿಸುತ್ತದೆ.

## ಹಾಗಾದರೆ – 'ವಿಗ್ರಹ' ಎಂದರೇನು?

ಇದು ಪ್ರಾಟಸ್ಟೆಂಟ್ ಸಭೆಗಳು ಏಕತೆ ಮತ್ತು ಅಧಿಕಾರದಲ್ಲಿ ಪೋಪ್ ವ್ಯವಸ್ಥೆಯ ಹಾಗೆ
ಆಗುವದಕ್ಕೆ ಪಡುವ ಪ್ರಯಾಸಗಳನ್ನು ಸೂಚಿಸುತ್ತದೆ.

## – ಇಡೀ ಲೋಕದಲ್ಲಿ ಒಂದೇ ಸಂಸ್ಥೆ!!

ಬಹಳ ಕಾಲದ ಹಿಂದೆಯೇ ಈ ಒಕ್ಕೂಟದ "ಪ್ರಯಾಸ"ವು ಆರಂಭವಾಯಿತು ಮತ್ತು ಇದುವರೆಗೆ ಮೂರು ಹಂತಗಳಲ್ಲಿ ನಡೆದಿದೆ –

1. 1846ರ **ಇವಾಂಜಲಿಕಲ್ ಅಲ್ಲೈಯನ್ಸ್,** ಇದು ಫೆಡರೇಷನ್ ಆಫ್ ಪ್ರಾಟೆಸ್ಟಂಟ್ ಚರ್ಚಸ್ ಅನ್ನು ತಂದಿತು.

2. ನಂತರ **ವರ್ಲ್ಡ್ ಕೌನ್ಸಿಲ್ ಆಫ್ ಚರ್ಚಸ್** (W.C.C ) ಎಂಬುದು 1948ರಲ್ಲಿ ಬಂದಿತು.

3. ಈಗ ಕೊನೆಯದಾಗಿ ಎಲ್ಲಾ ಪ್ರಾಟೆಸ್ಟಂಟ್ ಸಭೆಗಳ ಒಕ್ಕೂಟವನ್ನು ತರುವದಕ್ಕೆ ಹುಡುಕುತ್ತಿರುವ **ಎಕ್ಯೂಮೆನಿಕಲ್ ಮೂಮೆಂಟ್** ಎಂಬುದು ಈ ದಿನಗಳಲ್ಲಿ ನಮ್ಮ ಮಧ್ಯದಲ್ಲಿದೆ.

ಈಗ ನಾವು ಏನು ಓದುತ್ತೇವೆಂದರೆ ಈ ವಿಗ್ರಹವು "ಎರಡು ಕೊಂಬುಗಳಿರುವ ಮೃಗ"ದಿಂದ "ಅಧಿಕಾರ"ವನ್ನು ಪಡೆದುಕೊಳ್ಳುತ್ತದೆ.

**ಹೌದು! ಇಂಗ್ಲಾಂಡಿನ ಎಪಿಸ್ಕೋಪಲ್ ಸಭೆಯು ಈ ನೆಂಟಸ್ತಿಕ್ಕೆಗೆ ಅಧಿಕಾರವನ್ನು ಕೊಡಲಿದೆ.**

**'ಅಧಿಕಾರ' ಎಂದರೇನು?**

ಈ "ಅಧಿಕಾರ" ಎಂಬ ಸಾಧನದಿಂದ ಈ ಸಭೆಯು ನಿಜವಾದ ಯೇಸುಕ್ರಿಸ್ತನ ಸಭೆಯಿಂದ ಅಂಗೀಕಾರ ಹೊಂದಿದೆ ಅಥವಾ ಮಾನ್ಯತೆ ಪಡೆದಿದೆ ಎಂದು ಹಕ್ಕುಸಾಧಿಸುತ್ತಾರೆ.

**......ಅಪೋಸ್ತಲರ ಕಾಲದಿಂದಲೇ ಎನ್ನುತ್ತಾರೆ!!**

ಕೇವಲ ಎರಡು ಸಭೆಗಳು ಮಾತ್ರ ಆ "ಅಧಿಕಾರ"ದ ಹಕ್ಕು ಸಾಧಿಸುತ್ತಾರೆ!

– ರೋಮನ್ ಕ್ಯಾಥೋಲಿಕ್ ಸಭೆ ಮತ್ತು ಚರ್ಚ್ ಆಫ್ ಇಂಗ್ಲಾಂಡ್!

**ಇದನ್ನು ಅಪೋಸ್ತಲರ ಹಕ್ಕುದಾರರು ಎಂದು ಕರೆಯಲಾಗುತ್ತದೆ.**

**(APOSTOLIC SUCCESSION)**

ಈ ಎರಡು ಸಭೆಗಳು ಅದರ ಮೂಲವು ಅಪೋಸ್ತಲರ ಕಾಲದಿಂದ ಮುಖ್ಯವಾಗಿ ಅಪೋಸ್ತಲನಾದ ಪೇತ್ರನಿಂದ ಬಂದಿತೆಂದು ಹಕ್ಕು ಸಾಧಿಸುತ್ತಾರೆ!

ಆದ್ದರಿಂದ ಅವರು ಜನರನ್ನು ಆಶೀರ್ವದಿಸುವಾಗ ಅದನ್ನು ಅಪೋಸ್ತಲನ ಆಶೀರ್ವಾದಗಳು ಎಂದು ಕರೆಯುತ್ತಾರೆ!!

ಈಗ ಈ ಅಖಿಲ ಪ್ರಾಟೆಸ್ಟಂಟ್ ಸಭೆಗಳ ಒಕ್ಕೋಟಕ್ಕೆ ಮಾನ್ಯತೆ ಮತ್ತು ಗೌರವ ಹೊಂದಬೇಕಾದರೆ ಈ

**"ಅಪೋಸ್ತಲರ ಒಪ್ಪಿಗೆ" "APOSTOLIC APPROVAL"**

ಬೇಕಾಗಿತ್ತು ಮತ್ತು ಈ ಒಪ್ಪಿಗೆ ಇಗ್ಲಾಂಡಿನ ಎಪಿಸ್ಕೋಪಲ್ ಚರ್ಚನಿಂದ ಬರುತ್ತದೆ ಎಂದು ನಮಗೆ ಪ್ರವಾದನೆ ಹೇಳುತ್ತದೆ!

ಆದ್ದರಿಂದ "ಹೆಣ್ಣುಮಕ್ಕಳು" "ತಾಯಿ"ಯೊಂದಿಗೆ ನೆಂಟಸ್ತಿಕೆಯನ್ನು ಇಟ್ಟುಕೊಳ್ಳುತ್ತಾರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಕಟನೆ17:11-13**

**"ಮೊದಲಿದ್ದು ಈಗ ಇಲ್ಲದಿರುವ ಆ ಮೃಗವು ತಾನೇ ಎಂಟನೆಯವನು; ಅವನು ಆ ಏಳು ಮಂದಿಗೆ ಸೇರಿದವನಾಗಿದ್ದು ನಾಶನಕ್ಕೆ ಹೋಗುತ್ತಾನೆ. ನೀನು ಕಂಡ ಆ ಹತ್ತು ಕೊಂಬುಗಳು ರಾಜ್ಯವನ್ನು ಇನ್ನೂ ಹೊಂದದಿರುವ ಹತ್ತು ಮಂದಿ ರಾಜರು. ಅವರು ಮೃಗದೊಂದಿಗೆ ರಾಜರಂತೆ ಒಂದು ತಾಸಿನವರೆಗೆ ಅಧಿಕಾರವನ್ನು ಹೊಂದುತ್ತಾರೆ. ಅವರು ಒಂದೇ ಮನಸ್ಸುಳ್ಳವರಾಗಿದ್ದು ತಮ್ಮ ಅಧಿಕಾರವನ್ನೂ ಶಕ್ತಿಯನ್ನೂ ಮೃಗಕ್ಕೆ ಕೊಡುತ್ತಾರೆ."**

ಹೌದು! ಈ ದಿನಗಳಲ್ಲಿ ಈ ಪ್ರವಾದನೆಯ ವಾಕ್ಯವು ನಮಗೆ ಮಹಾ(ದೊಡ್ಡ) ಅರ್ಥವನ್ನು ಕೊಡುತ್ತದೆ.

**ನಿಜಾಂಶವೇನೆಂದರೆ ಅದರ ಒಂದು ಭಾಗವು ನೆರೆವೇರಿದೆ ಮತ್ತು ......ಇನ್ನೊಂದು ಭಾಗವು ನೆರವೇರುವದಕ್ಕೆ ಕಾಯುತ್ತಾ ಇದೆ!**

ಈಗ ನಾವು ಇದರ ಸಾಂಕೇತಿಕ ಅರ್ಥಗಳನ್ನು ನೋಡೋಣ –

**"ಮೊದಲಿದ್ದು ಈಗ ಇಲ್ಲದಿರುವ ಆ ಮೃಗವು ತಾನೇ ಎಂಟನೆಯ ಅರಸು; ಅವನು ಆ ಏಳು ಮಂದಿ ಅರಸುಗಳಿಗೆ ಸೇರಿದವನು; ನಾಶಕ್ಕೆ ಹೋಗುವವನು."**

ಇದು "ಏಳು ಮಂದಿ ಅರಸು"ಗಳಲ್ಲಿರುವ ಕ್ರಿಸ್ತವಿರೋಧಿಯಾದ ಪೋಪ್ ವ್ಯವಸ್ಥೆಯನ್ನು ಸೂಚಿಸುತ್ತದೆ. ಅಂದರೆ ಇದು ಹಳೆಯ ರೋಮನ್ ಸಾಮ್ರಾಜ್ಯದ ಏಳು ಮುಖ್ಯಸ್ಥರಲ್ಲಿ ಒಬ್ಬರು ಎಂದು ಸೂಚಿಸುತ್ತದೆ.

ಅದು ಎಂಟನೆಯ "ಅರಸ"ನಾಗಿ ಬರುವದು ಅಂದರೆ,

ಒಂದು ಕಾಲಕ್ಕೆ ಅದು ಶಕ್ತಿ ಮತ್ತು ಅಧಿಕಾರವನ್ನು ನವೀಕರಿಸುವದು ಆದರೆ ಕ್ರಿ.ಶ. 539–1799 ವರೆಗಿದ್ದಕ್ಕಿಂತ ವ್ಯತ್ಯಾಸವಾದ ಮತ್ತು ಪ್ರತ್ಯೇಕವಾದ ಅಧಿಕಾರವನ್ನು ಹೊಂದಿರುತ್ತದೆ.

**"ಒಂದು ಸಾವಿರದ ಇನ್ನೂರ ಅರವತ್ತು ದಿವಸಗಳು"**

**ಈ ಅಧಿಕಾರವನ್ನು ಹೇಗೆ ಪಡೆಯುವರು?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**"ನೀನು ಕಂಡ ಆ ಹತ್ತು ಕೊಂಬುಗಳು ಅಂದರೆ ರಾಜ್ಯವನ್ನು ಇನ್ನೂ ಹೊಂದದಿರುವ ಹತ್ತು ಮಂದಿ ಅರಸುಗಳು. ಅವರು ಒಂದು ಗಳಿಗೆಯವರೆಗೆ ರಾಜರಂತೆ ಆಳುವ ಅಧಿಕಾರವನ್ನು ಮೃಗದೊಂದಿಗೆ ಹೊಂದುತ್ತಾರೆ.ಅವರು ಒಂದೇ ಅಭಿಪ್ರಾಯವುಳ್ಳವರಾಗಿದ್ದು....."**

ಇಲ್ಲಿ "ಹತ್ತು ಕೊಂಬುಗಳು" ಎಂಬುದು ಬೇರೆ ಯಾರು ಅಲ್ಲ, ನಾವು ಪ್ರಕಟನೆ 12ನೇ ಅಧಿಕಾರದಲ್ಲಿ ಓದಿದ ಘಟಸರ್ಪ ಅಂದರೆ ರೋಮನ್ ಸಾಮ್ರಾಜ್ಯದ "ಹತ್ತು ವಿಭಾಗಗಳನ್ನು" ಸೂಚಿಸುತ್ತದೆ.

ಈ "ಹತ್ತು ಕೊಂಬುಗಳು" ಈ ದಿನಗಳಲ್ಲಿರುವ ಯೂರೋಪ್ ದೇಶದವರು!!

ಇವರೆಲ್ಲರು ಹೀಗಾಗಲೇ "ಒಂದೇ ಅಭಿಪ್ರಾಯ" ಉಳ್ಳವರಾಗಿದ್ದು ಅದನ್ನು **ಯೂರೋಪ್ ಯೂನಿಯನ್** ಎಂದು ಕರೆಯಲಾಗುತ್ತದೆ.




ಎಲ್ಲಾ ಎಲ್ಲೆ (ಗಡಿ)ಗಳನ್ನು ಮುರಿದು ಹಾಕಲಾಗಿದೆ ಮತ್ತು ಈಗ ಚಲಾವಣೆಯಲ್ಲಿರುವ ನೋಟು ಗಳೂ ಸಹ ಏಕರೂಪ ಮಾಡಲಾಗಿದೆ.

**"ದ ಯುರೋ"**

ನಿಜವಾಗಿಯೂ ಈ ಪ್ರವಾದನೆಯಲ್ಲಿ ಅರ್ಧಭಾಗ ನೆರವೇರಿದ್ದು

ಉಳಿದ ಅರ್ಧಭಾಗವು ಬೇಗನೆ, ಬಹು ಬೇಗನೆ ನೆರವೇರಲಿದೆ!

ಈ ಪ್ರವಾದನೆಯ ಉಳಿದ ಭಾಗವನ್ನು ಓದೋಣ –

**“ತಮ್ಮ ಶಕ್ತಿಯನ್ನೂ ಅಧಿಕಾರವನ್ನೂ ಮೃಗಕ್ಕೆ ಕೊಡುತ್ತಾರೆ.”**

ಈ "ಹತ್ತು ಕೊಂಬುಗಳು" ಅಥವಾ ಯೂರೋಪಿಯನ್ ಯೂನಿಯನ್ ತನ್ನ ಸಂಪೂರ್ಣವಾದ ಬೆಂಬಲವನ್ನು ಪೋಪ್ ವ್ಯವಸ್ಥೆ ಮತ್ತು ಅದರ ರೋಮನ್ ಕ್ಯಾಥೋಲಿಕ್ ಸಭೆಗೆ ನೀಡುವುದರ ಮೂಲಕ ಈ ಭಾಗದ ಪ್ರವಾದನೆಯು ಬಹು ಬೇಗನೆ ನೆರವೇರಲಿದೆ.

ಇದಕ್ಕೆ ಬೇಕಾದ ಕ್ರಮವನ್ನು ಹೀಗಾಗಲೇ ತೆಗೆದುಕೊಳ್ಳಲಾಗಿದೆ ಎಂದು ನಾವು ವಾಟಿಕನ್ ನ್ಯೂಸ್ ಪೇಪರ್ನಲ್ಲಿ ಜುಲೈ 23ನೇ 2003 ಇಸವಿಯಲ್ಲಿರುವ **"ಲೊಸ್ಸೆರ್ವಾಟೋರ್ ರೋಮಾನೊ"** ಎಂಬ ಪತ್ರಿಕೆಯಲ್ಲಿ ನೋಡುತ್ತೇವೆ –

(ಈ ಚಿತ್ರಕ್ಕಾಗಿ ಮುಂದಿನ ಪುಟವನ್ನು ತಿರುಗಿಸಿ ನೋಡಿ)


# L'OSSERVATORE ROMANO

EDITORIAL AND MANAGEMENT OFFICES VATICAN CITY

WEEKLY EDITION IN ENGLISH

UNICUIQUE SUUM NON PRAEVALEBUNT

Price: € 0.90
Back issues: € 1.58

THIRTY-SIXTH YEAR

N. 30 (1803) - 23 July 2003

Editorial Office: Via del Pellegrino, 00120 Vatican City, Europe - Telephone 39/06.698.99.390 - Telefax 39/06.698.83252 INTERNET: www.vatican.va/news_services/or/home_eng.html E-MAIL: ornet@ossrom.va



*ANGELUS AT CASTEL GANDOLFO: SUNDAY, 20 JULY*

## Build a new Europe: renew her Christian roots

***On Sunday, 20 July, the Holy Father led the recitation of the Angelus with the pilgrims who had gathered in the courtyard of his summer residence in Castel Gandolfo. The Pope introduced the Marian prayer with a Reflection on the importance of recalling Europe's Christian roots. In this period prior to the signing of the European Constitution in October, the Holy Father said, "The Church is also prompted to make her own contribution to this important task which involves all the members of European society". He pointed out that Christianity is a central and defining element, "established on the firm foundation of the classical heritage and the multiple contributions offered by the various ethnic and cultural streams which have succeeded one another down the centuries". Finally, the Holy Father recalled that 20 July is also the 100th anniversary of the death of Pope Leo XIII, "the Pope of Rerum Novarum", who published 10 Encyclicals on the Rosary and gave a renewed impetus to the study of St Thomas Aquinas. The following is a translation of the Pope's Reflection, which was given in Italian.***

Dear Brothers and Sisters,

1. In recent months intense work has



European culture universal. This heritage cannot be squandered. On the contrary, the new Europe should be helped "to build herself by revitalizing her original Christian roots" (cf. *ibid.*, n. 25).

### May Europe become 'transparently open to the Gospel'

3. May Mary, Mother of Hope, watch over the Church in Europe so that it may be more and more "transparently open to the Gospel" (*ibid.*, n. 125) and an authentic place for the growth of communion and unity, so that the full brightness of the face of Christ may shine out for the peace and joy of every inhabitant of the European Continent.

*After praying the Angelus, the Holy Father said:*

Today is the *centenary of the death of Pope Leo XIII*, Vincenzo Gioacchino Pecci. Remembered above all as the Pope of *Rerum Novarum*, the Encyclical that marked the begining of the modern social teaching of the Church, he developed a broad and articulate Magisterium; in particular, he reintroduced Thomistic studies and encouraged a deeper spiritual life in the Christian people. In this Year of the Rosary, it cannot be forgotten that Leo XIII dedicated 10 Encyclicals to the Rosary. To-

ಆದ್ದರಿಂದ, ಕೊನೆಯ ಘರ್ಷಣೆಯನ್ನುಂಟು ಮಾಡುವ ಹಂತವನ್ನು ಸಿದ್ಧಮಾಡುವದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಕಟನೆ 17:14 /19:19**

**"ಯಜ್ಞದ ಕುರಿಯಾದಾತನ ಮೇಲೆ ಯುದ್ಧಮಾಡುವರು, ಆದರೆ ಆತನು ಕರ್ತರ ಕರ್ತನೂ ರಾಜಾಧಿರಾಜನೂ ಆಗಿರುವದರಿಂದ ಅವರನ್ನು ಜಯಿಸುವನು; ಮತ್ತು ದೇವರು ಕರೆದವರೂ ದೇವರಾದುಕೊಂಡವರೂ ನಂಬಿಗಸ್ತರೂ ಆಗಿರುವ ಆತನ ಕಡೆಯವರು ಆ ಜಯದಲ್ಲಿ ಪಾಲುಗಾರರಾಗುವರು."**

**"ತರುವಾಯ ಆ ಮೊದಲನೆಯ ಮೃಗವೂ ಭೂರಾಜರೂ ಅವರ ಸೈನ್ಯಗಳವರೂ ಆ ಕುದುರೆಯ ಮೇಲೆ ಕೂತಿದ್ದವನ ಮೇಲೆಯೂ ಅತನ ಸೈನ್ಯದ ಮೇಲೆಯೂ ಯುದ್ಧ ಮಾಡುವದಕ್ಕಾಗಿ ಕೂಡಿಬಂದಿರುವದನ್ನು ಕಂಡೆನು."**

ಹೌದು! ಇದು ಕ್ರಿಸ್ತವಿರೋಧಿ – "ಮೃಗ" – ಪೋಪ್ ವ್ಯವಸ್ಥೆಯೊಂದಿಗಿನ ಕೊನೆಯ ಘರ್ಷಣೆ ಮತ್ತು ಹೋರಾಟದ ಪ್ರವಾದನೆಯ ಚಿತ್ರಣವಾಗಿದೆ ಮತ್ತು –

**"ಭೂರಾಜರೂ"** ➡ ರಾಜಕೀಯ ಅಧಿಕಾರಿಗಳ ಸಹಾಯ

**"ಅವರ ಸೈನ್ಯಗಳವರೂ"** ➡ ಪೋಪ್ ವ್ಯವಸ್ಥೆ ಮತ್ತು ಇದರ ನೆಂಟಸ್ತಿಕೆಯನ್ನು ಬೆಂಬಲಿಸುವ ಭೂಲೋಕದವರು.

ಈಗ ಈ ನೆಂಟಸ್ತಿಕೆಯ ಇನ್ನೂ ಹೆಚ್ಚಿನ ವಿವರವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಕಟನೆ 16:13,14**

**"ಮತ್ತು ಘಟಸರ್ಪ ಮೃಗ ಸುಳ್ಳುಪ್ರವಾದಿ ಇವರ ಬಾಯಿಗಳಿಂದ ಕಪ್ಪೆಗಳಂತಿದ್ದ ಮೂರು ಅಶುದ್ಧಾತ್ಮಗಳು ಬರುವದನ್ನು ಕಂಡೆನು. ಇವು ಮಹತ್ಕಾರ್ಯಗಳನ್ನು ಮಾಡುವ ದೆವ್ವಗಳು; ಭೂಲೋಕದಲ್ಲೆಲ್ಲಿಯೂ ಇರುವ ರಾಜರ ಬಳಿಗೆ ಹೋಗಿ ಸರ್ವಶಕ್ತನಾದ ದೇವರ ಮಹಾದಿನದಲ್ಲಾಗುವ ಯುದ್ಧಕ್ಕೆ ಅವರನ್ನು ಕೂಡಿಸುವವು."**

ಇಲ್ಲಿ ಮೂರು ಪಕ್ಷದವರ ನಡುವೆ ಇರುವ ನೆಂಟಸ್ತಿಕೆಯನ್ನು ಕುರಿತು ಮೂರು ಸಂಕೇತಗಳಲ್ಲಿ ವಿವರಿಸಲಾಗಿದೆ!

ಈ ಮೂರು ಸಂಕೇತಗಳು ಏನ್ನನ್ನು ಸೂಚಿಸುತ್ತದೆ ಎಂದರೆ –

➡ **"ಮೃಗ"**

ಪೋಪ್ ವ್ಯವಸ್ಥೆ ಮತ್ತು ರೋಮನ್ ಕ್ಯಾಥೋಲಿಕ್ ಸಭೆ.

**"ಘಟಸರ್ಪ"**

ಭೂಮಿ ಮೇಲಿನ ಸಾಮಾಜಿಕ ಅಧಿಕಾರಿಗಳು ಮತ್ತು ಸಾಮಾಜಿಕ ಅಧಿಕಾರಿಗಳ ಸಂಸ್ಥೆಗಳಾದ –

.......ದಿ ಯುನೈಟೆಡ್ ನೇಷನ್ಸ್ ಆರ್ಗನೈಷೇಷನ್ (ಯು.ಎನ್.ಓ.)

......ಮತ್ತು ಯೂರೋಪಿಯನ್ ಯೂನಿಯನ್ (ಇ.ಯು)

**"ಸುಳ್ಳು ಪ್ರವಾದಿ"**

ಇದು ಪ್ರಾಟೆಸ್ಟೆಂಟ್ ಸಭೆಗಳ ಒಕ್ಕೂಟಕ್ಕೆ ದೇವರು ಕೊಟ್ಟಿರುವ ಸಂಕೇತವನ್ನು ಸೂಚಿಸುತ್ತದೆ.

ಇವರು ದೇವರ ವಾಕ್ಯದ ಪ್ರವಾದಿಗಳೆಂದು ಹಕ್ಕು ಸಾಧಿಸಿ ಕೂಟಗಳನ್ನು ಏರ್ಪಡಿಸಿ ಮತ್ತು ಈಗ ದೂರದರ್ಶನಗಳಲ್ಲಿ ಕಾಣಿಸಿಕೊಳ್ಳುತ್ತಾರೆ, ಆದರೆ ನಿಜವಾಗಿಯೂ ಅವರು ಸುಳ್ಳುಪ್ರವಾದಿಗಳಾಗಿದ್ದಾರೆ.

ಹೌದು! ..... "**ಸುಳ್ಳು ಪ್ರವಾದಿ**"

ಆಹ್! ಹೌದು! ಈ ಮೂವರ ನೆಂಟಸ್ತಿಕೆಯ ಮೂಲಕ ಇಡೀ ಲೋಕವನ್ನು ಆಳ್ವಿಕೆ ಮಾಡಲು ಹುಡುಕುತ್ತಾರೆ!!

....ಮತ್ತು ಯಜ್ಞದ ಕುರಿಯಾದಾತನ ವಿರುದ್ಧ ಹೋರಾಟ ಮಾಡುತ್ತಾರೆ!!

ಈ ಒಕ್ಕೂಟ ಅಥವಾ ನೆಂಟಸ್ತಿಕೆಯು – **"ಆ ಕುದುರೆಯ ಮೇಲೆ ಕೂತಿದ್ದವನ ಮೇಲೆಯೂ ಆತನ ಸೈನ್ಯದ ಮೇಲೆಯೂ ಯುದ್ಧಮಾಡುವದಕ್ಕಾಗಿ"** (**ಪ್ರಕಟನೆ** 19:19) ಉಂಟಾಗಿದೆ.



ಇಲ್ಲಿ "ಬಿಳಿ ಕುದುರೆ" ಎಂದರೆ ಶುದ್ಧವಾದ ದೇವರ ಸತ್ಯವಾಕ್ಯವನ್ನು ಸೂಚಿಸುತ್ತದೆ ಮತ್ತು ಅದರ ಮೇಲೆ "ಕೂತಿದ್ದವನು"

"ಜೀವ ವಾಕ್ಯ"ವಾದ ನಮ್ಮ ಕರ್ತನಾದ ಯೇಸು ಕ್ರಿಸ್ತನನ್ನು ಸೂಚಿಸುತ್ತದೆ!

## ಕಣ್ಣಿಗೆಕಾಣದಿರುವ ಯೇಸುವನ್ನು ಶರೀರದಲ್ಲಿರುವ ಮನುಷ್ಯಶಕ್ತಿಗಳು ಹೇಗೆ ಯುದ್ಧಮಾಡಲು ಸಾಧ್ಯ?

ಆಹ್! ಅದು ಹೇಗೆಂದರೆ ಯಜ್ಞದ ಕುರಿಯಾದಾತನ ನಿಜವಾದ ಸಭೆಯ ಅಂಗಗಳಾಗಿರುವ "ಶರೀರದ ಅಂಗಗಳ"ನ್ನು ವಿರೋಧಿಸುವದನ್ನು ಸೂಚಿಸುತ್ತದೆ!!

**ಹೌದು! ಹೇಗೆ ಯೇಸುವಿನ ದಿನಗಳಲ್ಲಿ ಆತನಿಗೆ ಮತ್ತು ಯೆಹೂದ್ಯರ ಧಾರ್ಮಿಕ ವ್ಯವಸ್ಥೆಯ ವಿರೋಧವಾಗಿ ಕೊನೆಯ ಹೋರಾಟವಿತ್ತೋ ಅದೇ ರೀತಿ ಶರೀರದಲ್ಲಿರುವ ಸಭೆಯ ಕೊನೆಯ ಅಂಗಗಳ ಮತ್ತು ಕ್ರಿಸ್ತವಿರೋಧಿಯ ವ್ಯವಸ್ಥೆಗಳ ಮಧ್ಯೆ ಕೊನೆಯ ಘರ್ಷಣೆ ಉಂಟಾಗುತ್ತದೆ!**

ಈ ವಿಷಯದಲ್ಲಿ ಅನೇಕ ಆಳವಾದ ವಿವರಣೆಗಳಿವೆ, ಆದರೆ ಇಂದು ನಾವು ಅದನ್ನು ಕುರಿತು ಅಭ್ಯಾಸ ಮಾಡುವದಿಲ್ಲ.

ಆದರೆ ಕೊನೆಯ ಅಂತ್ಯವನ್ನು (CLIMAX) ಕುರಿತು ಕೆಳಗಿನ ವಾಕ್ಯದಲ್ಲಿ ನೋಡೋಣ –

**2 ಥೆಸಲೋನಿಕ 2:8**

**"ಅವನು ತೆಗೆದುಬಿಡಲ್ಪಟ್ಟ ಕೂಡಲೆ ಆ ಅಧರ್ಮಸ್ವರೂಪನು ಕಾಣ ಬರುವನು; ಅವನನ್ನು ಯೇಸು ಕರ್ತನು ತನ್ನ ಬಾಯ ಉಸುರಿನಿಂದ ಕೊಲ್ಲುವನು, ತನ್ನ ಪ್ರತ್ಯಕ್ಷತೆಯ ಪ್ರಕಾಶದಿಂದ ಸಂಹರಿಸುವನು."**

ಹೌದು! ಇಲ್ಲಿ, "ಅಧರ್ಮಸ್ವರೂಪನು" ಅಥವಾ ಕ್ರಿಸ್ತವಿರೋಧಿಯ ವ್ಯವಸ್ಥೆಯು "ಕಾಣಬರುವನು".

.....ಅಂದರೆ, "ಗುಪ್ತವಾಗಿರುವ ಅಧರ್ಮವು" ಬಯಲಿಗೆ ಬರುವದು ಮತ್ತು ಎಲ್ಲರಿಗೂ ಗೊತ್ತಾಗುವದು.

ಇದು ಯೇಸು ಕರ್ತನ ಬಾಯ "ಉಸುರಿ"ನಿಂದ ನೆರವೇರುವದು ಅಂದರೆ ಕೊನೆಯ "ಶರೀರ ಅಂಗಗಳ" ಬಾಯಿಯ ಮುಖಾಂತರ ಸಾಕ್ಷಿ ಮತ್ತು ನಿವೇದನೆ ಯನ್ನು ಸೂಚಿಸುತ್ತದೆ.
ಇದರಿಂದ ಈ ಕ್ರಿಸ್ತವಿರೋಧಿಯ ನಿಜವಾದ ಸ್ವಭಾವ ಮತ್ತು ಗುರುತು ಬಯಲಿಗೆ ಬರುತ್ತದೆ.

ಈ ವಿಷಯಗಳ ಆಳವಾದ ವಿವರಗಳನ್ನು ಈಗ ನಾವು ಅಭ್ಯಾಸ ಮಾಡುವದಿಲ್ಲ!

**ಆದರೆ ಇದರಿಂದ ಕ್ರಿಸ್ತವಿರೋಧಿ ವ್ಯವಸ್ಥೆ ಕೊನೆಯ ಮತ್ತು ಅಂತಿಮ ನಾಶನ ಉಂಟಾಗುವದಕ್ಕೆ ಕಾರಣವಾಗುತ್ತದೆ.**

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಕಟನೆ 17:16**

**"ಇದಲ್ಲದೆ ಹತ್ತು ಕೊಂಬುಗಳನ್ನೂ ಮೃಗವನ್ನೂ ಕಂಡಿಯಲ್ಲ? ಇವುಗಳಿಂದ ಸೂಚಿತರಾದವರು ಆ ಜಾರಸ್ತ್ರೀಯನ್ನು ದ್ವೇಷಿಸಿ ಅವಳನ್ನು ಗತಿಗೆಟ್ಟವಳನ್ನಾಗಿಯೂ ಬಟ್ಟೆಯಿಲ್ಲದವಳನ್ನಾಗಿಯೂ ಮಾಡಿ ಅವಳ ಮಾಂಸವನ್ನು ತಿಂದು ಅವಳನ್ನು ಬೆಂಕಿಯಿಂದ ಸುಟ್ಟುಬಿಡುವರು."**

ಹೌದು! ಇದು "ಹತ್ತು ಕೊಂಬುಗಳಿಂದ" ಪೋಪ್ ವ್ಯವಸ್ಥೆ ಪಡೆದು ಕೊಂಡ ಸಹಾಯ ಹಸ್ತವನ್ನು ಹಿಂತೆಗೆದು ಕೊಳ್ಳುವುದರ ಚಿತ್ರಣವಾಗಿದೆ.

ಇದರಿಂದ ಪೋಪ್ ವ್ಯವಸ್ಥೆ ಮತ್ತು ಸಾಮಾಜಿಕ ಅಧಿಕಾರಿಗಳು ಹಂಚಿಕೊಂಡು ಅಧಿಕಾರ ಮತ್ತು ಶಕ್ತಿಗಳು ಮುರಿಯಲ್ಪಡುವವು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

ಪ್ರಕಟನೆ 16:19 – **"ಮಹಾ ಪಟ್ಟಣವು ಮೂರು ಭಾಗವಾಯಿತು"**

ಹೌದು! "ಮಹಾ ಪಟ್ಟಣವು "ಮೃಗ", "ಘಟಸರ್ಪ" ಮತ್ತು "ಸುಳ್ಳುಪ್ರವಾದಿ" ಈ ಮೂರರ ನೆಂಟಸ್ಥಿಕೆಯನ್ನು ಸೂಚಿಸುತ್ತದೆ.

**ಈ ಒಕ್ಕೂಟವು ನಂತರ ಪೂರ್ಣವಾಗಿ ಮುರಿಯಲ್ಪಡುವವು.**

**ನಂತರ ಈ ಸಂಕೇತಗಳಲ್ಲಿ ಏನ್ನನ್ನು ಓದುತ್ತೇವೆ?**

ಬನ್ನಿ ನೋಡೋಣ –

**"....ಅವಳನ್ನು ಗತಿಗೆಟ್ಟವಳನ್ನಾಗಿಯೂ ಬಟ್ಟೆಯಿಲ್ಲದವಳನ್ನಾಗಿಯೂ"**

ಇದು ಸಹಾಯ ಹಸ್ತವಾಗಿ ಮೊದಲು ನೀಡಿದಂತಹ ಶಕ್ತಿ ಮತ್ತು ಅಧಿಕಾರವನ್ನು ಕಸಿದುಕೊಳ್ಳುವದನ್ನು (ಹಿಂತೆಗೆದುಕೊಳ್ಳುವದನ್ನು) ಸೂಚಿಸುತ್ತದೆ.

ಈ ಸಾಮಾಜಿಕ ಅಧಿಕಾರಿಗಳು ತಮ್ಮನ್ನೇ ಬೇರ್ಪಡಿಸಿಕೊಂಡು
ಈ ಕ್ರಿಸ್ತವಿರೋಧಿ ವ್ಯವಸ್ಥೆಯ ನಿಜವಾದ ಗುರುತು –

– "ಜಾರತ್ವ"ವೆಂದು ತಿಳಿದು ಅದರಿಂದ ಬೇರೆಯಾಗಿರುವರು.

ನಂತರ ನಾವು ಹೀಗೆ ಓದುತ್ತೇವೆ –

**“.....ಅವಳ ಮಾಂಸವನ್ನು ತಿಂದು....."**

ಇದು ಇಡೀ ಶರೀರದ ವ್ಯವಸ್ಥೆಯನ್ನು ವ್ಯಯಮಾಡುವದು ಮತ್ತು ನಾಶವಾಗುವದನ್ನು ಸೂಚಿಸುತ್ತದೆ.

**“......ಅವಳನ್ನು ಬೆಂಕಿಯಿಂದ ಸುಟ್ಟುಬಿಡುವರು....”**

ಇದು ನ್ಯಾಯತೀರ್ಪುಗಳು – ಪ್ರತೀಕಾರದ ನ್ಯಾಯತೀರ್ಪುಗಳು ಮತ್ತು ದೇವರ "ಕೋಪವು” ಈ ವ್ಯವಸ್ಥೆಯನ್ನು ಸರ್ವನಾಶ ಮಾಡುವದನ್ನು ಸೂಚಿಸುತ್ತದೆ.

ಈ ನ್ಯಾಯತೀರ್ಪಿನ ವಿವರಗಳನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಕಟನೆ 14:10**

**“ಅಂಥವನು ದೇವರ ಕೋಪವೆಂಬ ಪಾತ್ರೆಯಲ್ಲಿ ಏನೂ ಬೆರಸದೆ ಹಾಕಿದ ಆತನ ರೌದ್ರವೆಂಬ ದ್ರಾಕ್ಷಾರಸವನ್ನು ಕುಡಿಯುವನು. ಪರಿಶುದ್ಧ ದೂತರ ಮುಂದೆಯೂ ಕುರಿಮರಿಯಾದಾತನ ಮುಂದೆಯೂ ಬೆಂಕಿಯಿಂದ ಮತ್ತು ಗಂಧಕದಿಂದ ಯಾತನೆಪಡುವನು.”**

ಇದು ಆ ವ್ಯವಸ್ಥೆಗಳಲ್ಲಿ ಸದಸ್ಯರಾಗಿದ್ದ ಪ್ರತಿಯೊಬ್ಬರೂ, ಅದು ದೇವರಿಂದ ಬಂದಿದ್ದು ಅಂದುಕೊಂಡು ಮತ್ತು.... ಅದಕ್ಕೆ ಅಷ್ಟು ನಂಬಿಗಸ್ತರಾಗಿದ್ದ ಅದೇ ವ್ಯವಸ್ಥೆಗಳಿಗೆ ನ್ಯಾಯ ತೀರ್ಪು("ಬೆಂಕಿ") ಮತ್ತು ಕೊನೆಯ ನಾಶನ("ಗಂಧಕ") ವಾಗುವುದನ್ನು ನೋಡುವಾಗ ಉಂಟಾಗುವ ಮಾನಸಿಕ ಹಿಂಸೆಗೆ ಚಿತ್ರಿತವಾಗಿದೆ!!

ಮತ್ತೆ ನಾವು ಹೀಗೆ ಓದುತ್ತೇವೆ –

### ಪ್ರಕಟನೆ 18:21

"ಆಗ ಬಲಿಷ್ಠನಾದ ಒಬ್ಬ ದೂತನು ಬೀಸುವ ದೊಡ್ಡ ಕಲ್ಲಿನಂತಿರುವ ಒಂದು ಕಲ್ಲನ್ನು ಎತ್ತಿ ಸಮುದ್ರದೊಳಗೆ ಹಾಕಿ - ಮಹಾ ಪಟ್ಟಣವಾದ ಆ ಬಾಬೆಲು ಹೀಗೆಯೇ ಬಲಾತ್ಕಾರದಿಂದ ಕೆಡವಲ್ಲಟ್ಟು ಇನ್ನೆಂದಿಗೂ ಕಾಣಿಸುವದಿಲ್ಲ."

**ಹೌದು! ಕ್ರಿಸ್ತವಿರೋಧಿ ವ್ಯವಸ್ಥೆಗಳ ವ್ಯವಸ್ಥೆಯ ಕೊನೆಯ ನಾಶನದ ಮುಕ್ತಾಯವಾಗಿದೆ!**

ಮತ್ತು ಈ ಕೊನೆಯ ನಾಶನದ ಮುಕ್ತಾಯದ ಮತ್ತಷ್ಟು ವಿವರಗಳನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

### ಪ್ರಕಟನೆ 19:20

"ಆಗ ಮೃಗವು ಸೆರೆಸಿಕ್ಕಿತು; ಇದಲ್ಲದೆ ಮೃಗದ ಮುಂದೆ ಮಹಾತ್ಕಾರ್ಯಗಳನ್ನು ಮಾಡಿ ಮೃಗದ ಗುರುತು ಹಾಕಿಸಿಕೊಂಡುವರನ್ನು ಅದರ ವಿಗ್ರಹವನ್ನು ಆರಾಧಿಸಿದವರನ್ನೂ ಮರುಳುಗೊಳಿಸಿದ ಆ ಸುಳ್ಳು ಪ್ರವಾದಿಯೂ ಅದರ ಜೊತೆಯಲ್ಲಿ ಸೆರೆ ಸಿಕ್ಕಿದನು. ಇವರಿಬ್ಬರೂ ಜೀವಸಹಿತವಾಗಿ ಗಂಧಕದಿಂದ ಉರಿಯುವ ಬೆಂಕಿಯ ಕೆರೆಯಲ್ಲಿ ಹಾಕಲ್ಪಟ್ಟರು."

ಈಗ ನಾವು ಇದರ ಸಾಂಕೇತಿಕ ಚಿತ್ರಣವನ್ನು ನೋಡೋಣ –

**"ಮೃಗ"**

ಇದು ರೋಮನ್ ಕ್ಯಾಥೋಲಿಕ್ಸ ಧಾರ್ಮಿಕ–ರಾಜಕೀಯ (ಸಭೆ+ರಾಜ್ಯ ಸರ್ಕಾರ)ದ ಪೋಪ್ ವ್ಯವಸ್ಥೆಯನ್ನು ಸೂಚಿಸುತ್ತದೆ.

**"ಸುಳ್ಳು ಪ್ರವಾದಿ"**

ಇದು ಪ್ರಾಟೆಸ್ಟಾಂಟಿಸಮ್ನಲ್ಲಿರುವ ವಿವಿದ ಪಂಗಡದ ಒಕ್ಕೂಟದ ಇನ್ನೊಂದು ಸಂಕೇತವಾಗಿದೆ.

ದೇವರ ವಾಕ್ಯದ ಸುಳ್ಳು ಬೋಧಕರು!!

ಇದನ್ನು ಕುರಿತು ನಾವು ಸತ್ಯವೇದದಲ್ಲಿಯೂ ಸಹ ಓದುತ್ತೇವೆ –

### ಯೆರೆಮೀಯ 14:14

"ಆಗ ಯೆಹೋವನು ನನಗೆ ಹೀಗೆ ನುಡಿದನು - ಪ್ರವಾದಿಗಳು ನನ್ನ ಹೆಸರಿನಿಂದ ಸುಳ್ಳಾಗಿ ಪ್ರವಾದಿಸುತ್ತಾರೆ; ನಾನು ಅವರನ್ನು ಕಳುಹಿಸಲಿಲ್ಲ; ಅವರಿಗೆ ಅಪ್ಪಣೆಕೊಡಲಿಲ್ಲ, ಏನೂ ಹೇಳಲಿಲ್ಲ; ಅವರು ಸುಳ್ಳಾದ ದಿವ್ಯ ದರ್ಶನವನ್ನೂ ಕಣಿಯನ್ನೂ

ಮಾಯಾತಂತ್ರವನ್ನೂ ಸ್ವಕಲ್ಪಿತಮೋಸವನ್ನೂ ನಿಮಗೆ ಪ್ರಕಟಿಸುತ್ತಾರೆ."

## ಯೆರೆಮೀಯ 23:16-18

"ಆದಕಾರಣ ಸೇನಾಧೀಶ್ವರನಾದ ಯೆಹೋವನು ಪ್ರವಾದಿಗಳ ವಿಷಯದಲ್ಲಿ ಹೀಗೆನ್ನುತ್ತಾನೆ - ನಿಮಗೆ ಪ್ರವಾದಿಸುವ ಪ್ರವಾದಿಗಳ ಮಾತುಗಳನ್ನು ಕೇಳಬೇಡಿರಿ; ನಿಮ್ಮಲ್ಲಿ ವ್ಯರ್ಥನಿರೀಕ್ಷೆಯನ್ನು ಹುಟ್ಟಿಸುತ್ತಾರೆ; ಯೆಹೋವನ ಬಾಯಿಂದ ಹೊರಟದ್ದನ್ನು ನುಡಿಯದೆ ಸ್ವಂತ ಹೃದಯಕ್ಕೆ ಹೊಳೆದದ್ದನ್ನೇ ಹೇಳುತ್ತಾರೆ. ನನ್ನನ್ನು ಅಸಡ್ಡೆಮಾಡುವವರಿಗೆ - ನಿಮಗೆ ಶುಭವಾಗುವದು ಎಂಬದಾಗಿ ಯೆಹೋವನು ಅಂದಿದ್ದಾನೆ ಎಂದು ಹೇಳುತ್ತಲೇ ಇದ್ದಾರೆ....."

**"ಜೀವಸಹಿತವಾಗಿ"**

ಇದು ಅವರು ಅಧಿಕಾರದಲ್ಲಿ ಪೂರ್ತಿಯಾಗಿ ನಿರತರಾಗಿರುವ ವ್ಯವಸ್ಥೆಯ ಸ್ಥಿತಿಯನ್ನು ಸೂಚಿಸುತ್ತದೆ!

**"ಗಂಧಕದಿಂದ ಉರಿಯುವ ಬೆಂಕಿಯ ಕೆರೆಯಲ್ಲಿ"**

ಇದು ಸಂಪೂರ್ಣವಾದ ಮತ್ತು ನಿತ್ಯನಾಶನವನ್ನು ಸೂಚಿಸುತ್ತದೆ!

**ಹೌದು! ಆದ್ದರಿಂದ ಕ್ರಿಸ್ತವಿರೋಧಿ ವ್ಯವಸ್ಥೆಯು ಇನ್ನೆಂದಿಗೂ ಇಲ್ಲದಂತೆ ಸಂಪೂರ್ಣವಾಗಿ ನಾಶವಾಗುವದು!**

ಹೌದು! ಈ ಬಾಬೆಲ್ ಕ್ರಿಸ್ತವಿರೋಧಿ ವ್ಯವಸ್ಥೆಯ ಸಂಪೂರ್ಣ ನಾಶನ

**–"ತಾಯಿ ಮತ್ತು ಮಗಳು"**

ಇದರ ಪರಿಣಾಮವು ಎಲ್ಲಾದೇಶಗಳಿಗೆ ದೊಡ್ಡ ಸಂಕಟದ ಮುಕ್ತಾಯ ಮತ್ತು ಎರಡನೆಯ ಲೋಕದ ಅಂತ್ಯವಾಗುತ್ತದೆ.

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಯೆರೆಮೀಯ 50:46

"ಬಾಬೆಲು ಶತ್ರುವಶವಾಯಿತೆಂಬ ಕೋಲಾಹಲಕ್ಕೆ ಭೂಮಿಯು ಕಂಪಿಸುತ್ತದೆ, ಅದರ ಮೊರೆಯು ಜನಾಂಗಗಳಲ್ಲಿ ಕೇಳಿಸುತ್ತದೆ."

ಹೌದು! ಆದ್ದರಿಂದ ಈ ಕ್ರಿಸ್ತವಿರೋಧಿವ್ಯವಸ್ಥೆಗಳ ವ್ಯವಸ್ಥೆಯನ್ನು ಕುರಿತು ಇಂದು ಅಭ್ಯಾಸ ಮಾಡಿದ್ದೇವೆ –

......ತೋರಿಕೆಯಲ್ಲಿ ಅದು ಕ್ರಿಸ್ತನ ವ್ಯವಸ್ಥೆಯಂತೆ ಕಾಣುತ್ತದೆ.

ಯೇಸುವಿನ ಎರಡನೆಯ ಬರುವಿಕೆಗೆ ಮೊದಲು (ಮತ್ತಾಯ 25:31) "ಆತನ ರಾಜ್ಯವು ಭೂಮಿಯಲ್ಲಿ" ಸ್ಥಾಪಿಸಲ್ಪಟ್ಟಿದೆ ಎಂದು ಹಕ್ಕು ಸಾಧಿಸುತ್ತಾರೆ.

ಆದರೆ ಇದು ಸಂಪೂರ್ಣವಾದ ಸುಳ್ಳು ಬೋಧನೆಗಳು ಮತ್ತು ತಪ್ಪಾದವುಗಳಾಗಿವೆ.

ದೇವರ ಸತ್ಯಕ್ಕೆ ಮತ್ತು ಆತನ ಸೇವಕರಿಗೆ ನಾಶನವನ್ನುಂಟುಮಾಡುವುದಕ್ಕೆ ಕಾರಣವಾಗುತ್ತದೆ. (ಪ್ರಕಟನೆ 17:6)

ಇದು ಸೈತಾನನ ಸೃಷ್ಟಿ (ಕ್ರಿಯೆ)ಯಾಗಿದ್ದು, ಸಭೆಗಳನ್ನು ಭ್ರಾಂತಿಗೊಳಿಸಿ (ತಪ್ಪು ತಿಳುವಳಿಕೆನೀಡಿ), ಅವರನ್ನು ಸಂಪೂರ್ಣವಾದ ಕತ್ತಲೆಯಲ್ಲಿಟ್ಟಿದ್ದಾನೆ!!

**ನಿಜವಾಗಿಯೂ ಇದೊಂದು - "ಅಧರ್ಮ ಸ್ವರೂಪದ ರಹಸ್ಯವಾಗಿದೆ."**

ಈ ದಿನಗಳಲ್ಲಿ ಪ್ರಾಟೆಸ್ಟಂಟ್ಸ್ ಜನರು ರೋಮನ್ ಕ್ಯಾಥೋಲಿಕ್ ಜನರನ್ನು ಕ್ರಿಸ್ತವಿರೋಧಿ ಎಂದು ಕರೆಯುತ್ತಾರೆ!!


....ಮತ್ತು ರೋಮನ್ ಕ್ಯಾಥೋಲಿಕ್ ಜನರು ಪ್ರಾಟೆಸ್ಟಂಟ್ಸ್ ಜನರನ್ನು ಕ್ರಿಸ್ತವಿರೋಧಿ ಎಂದು ಕರೆಯುತ್ತಾರೆ!!

**ಈ ವಿಷಯದಲ್ಲಿ ನಿಜವಾಗಿಯೂ ಇಬ್ಬರೂ ಸರಿಯೇ ಮತ್ತು ಸತ್ಯವನ್ನೇ ಮಾತನಾಡುತ್ತಿದ್ದಾರೆ!!**

ಸತ್ಯವೇದದಲ್ಲಿ ಬರೆದಿರುವ ಮಹಾ ಕ್ರಿಸ್ತವಿರೋಧಿ ವ್ಯವಸ್ಥೆಗೆ ಇಬ್ಬರೂ ಭಾಗಿಗಳಾಗಿದ್ದಾರೆ!


ಇಂದು ನಾವು ಪಡೆದ ಈ ಮಹಾ ಸತ್ಯಕ್ಕಾಗಿ ನಾವು ದೇವರಿಗೆ ವಂದನೆಗಳನ್ನು ಸಲ್ಲಿಸುತ್ತೇವೆ!

..... ಆಮೆನ್ .....



For Private Circulation Only

NOT FOR SALE




For more Subjects contact: MESSENGERS OF CHRIST E-mail: thekingdom1_6@yahoo.com